**S.D.P.T.FIRST GRADE COLLEGE, KATEEL-574148**
**Reaccredited with B+ Grade by NAAC (CGPA 2.53)**
Phone No.: 0824-2200327, Mobile : 9945590327
Website: http://sdptfgcollege.com/ E-mail: sdptfg_college@yahoo.in

SDPT/Finalsynopsis/ 2021-22 05.07.2021

To,

The Registrar (Evaluation)
Mangalore University,
Mangalagangothri.

Dear Sir,

Sub : Sending of Ph.D. (Sanskrit) Final Synopsis of Mr. Nagaraja N.D.

Ref : MUEXB/Ph.D./CR-87/Sans/2019-20.**E.13**, dtd: 25.11.2020.

MU/EXB/Ph.D./CR-87/Sans/2020-21.**E.13**, dtd: 26.04.2021.

----

I am hereby sending the Ph.D. Final Synopsis of the thesis entitled "ವಿಷ್ಣುಶರ್ಮರ ಪಂಚತಂತ್ರದಲ್ಲಿ ಶೈಕ್ಷಣಿಕ ಮನೋವಿಜ್ಞಾನ ಮತ್ತು ವ್ಯಕ್ತಿತ್ವ ನಿರ್ಮಾಣ ಕಲೆ – ಒಂದು ವಿಮರ್ಶಾತ್ಮಕ ಅಧ್ಯಯನ" by Mr. Nagaraja N.D. who is doing research work under the guidance of Dr.Nagaraj B.

With regards,

Yours faithfully,

Principal
Sri Durga Parameshwari Temple
First Grade College
KATEEL - 574 148

Encl : Copies of Synopsis

# PH.D. FINAL-SYNOPSIS

**NAME OF THE SCHOLAR.**
Mr. NAGARAJA N. D.
RESEARCH SCHOLAR IN SANSKRIT.
DURGA CENTRE FOR PG STUDIES.
& RESEARCH IN SANSKRIT.KATEEL.
D K.Dist.UNIVERSITY OF MANGALORE
KARNATAKA.574148.

**NAME OF THE GUIDE.**
Dr. NAGARAJA B.
PROFESSOR & GUIDE IN SANSKRIT.
DURGA CENTRE FOR PG STUDIES.
& RESEARCH IN SANSKRIT.KATEEL.
D K.Dist.UNIVERSITY OF MANGALORE
KARNATAKA.574148.

**SUBJECT: ಸಂಸ್ಕೃತ**

TOPIC:– "**ವಿಷ್ಣುಶರ್ಮರ ಪಂಚತಂತ್ರದಲ್ಲಿ ಶೈಕ್ಷಣಿಕ – ಮನೋವಿಜ್ಞಾನ ಮತ್ತು ವ್ಯಕ್ತಿತ್ವ ನಿರ್ಮಾಣ ಕಲೆ**" ಒಂದು ವಿಮರ್ಶಾತ್ಮಕ ಅಧ್ಯಯನ.

ಪಿಎಚ್.ಡಿ. ಮಹಾಪ್ರಬಂಧದ ಅಂತಿಮ ಸಾರಲೇಖ.

**ಅಧ್ಯಯನ ಕೇಂದ್ರ**
**ಶ್ರೀ ದುರ್ಗಾ ಸಂಸ್ಕೃತ ಸ್ನಾತಕೋತ್ತರ ಮತ್ತು ಸಂಶೋಧನಾ ಅಧ್ಯಯನ ಕೇಂದ್ರ.**
ಕಟೀಲು. ದಕ್ಷಿಣ–ಕನ್ನಡ ಜಿಲ್ಲೆ.
**ಮಂಗಳೂರು ವಿಶ್ವವಿದ್ಯಾನಿಲಯ**
ಕರ್ನಾಟಕ – 574 148.

# ಪರಿವಿಡಿ


| ಕ್ರ.ಸಂ. | ವಿಷಯದ ವಿವರ | ಪುಟ ಸಂಖ್ಯೆ |
|---|---|---|
| | ಮಂಗಲಾಚರಣೆ ಮತ್ತು ಮೊದಲ ಮಾತು | |
| | **ಪ್ರಾಸ್ತಾವಿಕ ವಿಭಾಗ** | |
| ಪ್ರಸ್ತಾವನೆ–1. | ವಿಷಯದ ಆಸಕ್ತಿ ಮತ್ತು ಉದ್ದೇಶ – ವಿಷಯದ ವ್ಯಾಪ್ತಿ ಮತ್ತು ಪ್ರಯೋಜನ | |
| **ಪೀಠಿಕೆ–2.** | ವಿಶ್ವ ಸಾಹಿತ್ಯದಲ್ಲಿ ಸಂಸ್ಕೃತ ಸಾಹಿತ್ಯದ ವಿಶೇಷ ಸ್ಥಾನಮಾನ | |
| | ಅಧ್ಯಯನದ ಉದ್ದೇಶ – ವ್ಯಾಪ್ತಿ – ವಿಷಯ ಪ್ರವೇಶ | |
| | **ಅಧ್ಯಾಯಗಳ ವಿಭಾಗ** | |
| **ಅಧ್ಯಾಯ–1** | **ಸಂಸ್ಕೃತ ಕಥಾ ಸಾಹಿತ್ಯ – ನೀತಿಕಾವ್ಯಗಳು– ನೀತಿ ಕಥೆಗಳು** | |
| | 1–1. ಸಂಸ್ಕೃತ ಸಾಹಿತ್ಯದ ಪ್ರಾಚೀನತೆ ಮತ್ತು ವೈಶಿಷ್ಟ್ಯ | |
| | 1–2. ಸಂಸ್ಕೃತ ಸಾಹಿತ್ಯದಲ್ಲಿ ನೀತಿಕಾವ್ಯಗಳು–ಇದರ ಉದ್ಭವ ಮತ್ತು ವಿಕಾಸ | |
| | 1–3. ನೀತಿಭೋದಕ ಕಥಾ ಸಾಹಿತ್ಯ– ಪಂಚತಂತ್ರ ನೀತಿ ಕಥೆಗಳು– ಇದರ ವಿಶಿಷ್ಟ ಲಕ್ಷಣಗಳು | |
| | 1–4. ಪಂಚತಂತ್ರದ ಕಾಲ–ಕರ್ತೃ–ದೇಶ–ವಿಚಾರ | |
| | 1–5. ಪಂಚತಂತ್ರದ ವಿಶ್ವವ್ಯಾಪಿ ಪ್ರಭಾವ | |
| **ಅಧ್ಯಾಯ–2** | **ಶಿಕ್ಷಣದಲ್ಲಿ ಮನೋವಿಜ್ಞಾನ** | |
| | 2–1. ಮನೋವಿಜ್ಞಾನ – ಪೀಠಿಕೆ – ವ್ಯಾಪ್ತಿ – ಪಾತ್ರ<br>(Psychology - Introduction - Scope-It's Role) | |
| | 2–2. ಶೈಕ್ಷಣಿಕ ಮನೋವಿಜ್ಞಾನ – ಅನ್ವಯಿಕ ವಿಜ್ಞಾನ – ಅರ್ಥ – ವ್ಯಾಖ್ಯೆ – ಪ್ರಾಮುಖ್ಯತೆ<br>(Educational Psychology - Applied Science -<br>meaning - definition - importance) | |
| | 2–3. ಶಿಕ್ಷಣದಲ್ಲಿ ಮನೋವಿಜ್ಞಾನದ ಮಹತ್ವ<br>(Importance of Psychology in Education) | |
| | 2–4. ಪಂಚತಂತ್ರ ನೀತಿಕಥೆಗಳಲ್ಲಿ ಕಂಡುಬರುವ ಕೆಲವು ಶೈಕ್ಷಣಿಕ ಮನೋವಿಜ್ಞಾನದ ಹಾಗೂ<br>ವ್ಯಕ್ತಿತ್ವ ನಿರ್ಮಾಣ ಪರಿಕಲ್ಪನೆಗಳ ವಿಶ್ಲೇಷಣೆ | |
| **ಅಧ್ಯಾಯ–3** | **ವ್ಯಕ್ತಿತ್ವದ ಬೆಳವಣಿಗೆ ಮತ್ತು ವಿಕಾಸ** | |
| | 3–1. ವ್ಯಕ್ತಿಯ ಬೆಳವಣಿಗೆಯಲ್ಲಿ ಮೂಲಸ್ವಭಾವ ಮತ್ತು ಸನ್ನಿವೇಶಗಳ ಪ್ರಭಾವ–<br>ವೈಯುಕ್ತಿಕ ಭಿನ್ನತೆಗಳು (Individual Differences) | |
| | 3–2. ಕಲಿಕೆ – ಅರ್ಥ – ಸ್ವರೂಪ (Learning-meaning-nature) | |

३-३. ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು -

ಅಭಿಪ್ರೇರಣೆ - (Motivation) - ಅವಧಾನ Attention)

३-४. ಸ್ಮೃತಿ - ವಿಸ್ಮೃತಿ - ಕಲಿಕೆಯ ವರ್ಗಾವಣೆ

(Memory-Forgetting-Transfer of learning)

३-५. पञ्चतन्त्रस्य प्रथमं तन्त्रम्-"मित्रभेदः"ಕಥೆಗಳ ವಿಶ್ಲೇಷಣೆ.

म

**ಅಧ್ಯಾಯ-4** **ಮನಶ್ಶಕ್ತಿಯ ವ್ಯಾಪಕ ಸ್ವರೂಪ - ಕಲಿಕೆ ಮತ್ತು ವ್ಯಕ್ತಿತ್ವದ ಮೇಲೆ ಅದರ ಪ್ರಭಾವ.**

4-1. ಉನ್ನತಮಟ್ಟದ - ಮನೋವ್ಯಾಪಾರಗಳು

4-2. ಆಲೋಚನೆ - ವಿವೇಚನೆ - ಆಲೋಚಿಸದೆ ತೀರ್ಮಾನಕ್ಕೆ ಬರುವುದರ ಅಪಾಯ

4-3. ಮನೋಧೋರಣೆಗಳು - ವರ್ತನೆಗಳು - ಪರಿವರ್ತನೆ - ಶೀಲಸಂಪನ್ನತೆ

4-4. पञ्चतन्त्रस्य प्रथमं तन्त्रम् - "मित्रभेदः" ಕಥೆಗಳ ವಿಶ್ಲೇಷಣೆ ಮುಂದುವರಿಕೆ.

**ಅಧ್ಯಾಯ-5.** **ಜ್ಞಾನಾತ್ಮಕ ಬೆಳವಣಿಗೆ ಮತ್ತು ಸಂವೇಗಾತ್ಮಕ ಬುದ್ಧಿಶಕ್ತಿ ವಿಕಾಸ.**

5-1. ಸೃಜನಶೀಲತೆ - ಅರ್ಥ - ವ್ಯಾಪ್ತಿ

5-2. ವ್ಯಕ್ತಿತ್ವ ಮತ್ತು ವ್ಯಕ್ತಿತ್ವ ವಿಕಾಸ

5-3. ವ್ಯಕ್ತಿತ್ವನಿರ್ಮಾಣ - ಹೊಂದಾಣಿಕೆ - ಸಹಬಾಳ್ವೆ - ಒಗ್ಗಟ್ಟಿನಲ್ಲಿ ಸಾಧನೆ

5-4. ಉತ್ತಮ ಅಭ್ಯಾಸಗಳ ಬೆಳವಣಿಗೆ - ನಾಯಕತ್ವ - ಉತ್ತಮ ನಾಯಕನ ಗುಣಗಳು

5-5. पञ्चतन्त्रस्य द्वितीयं तन्त्रम्- "मित्रसम्प्राप्तिः"ಕಥೆಗಳ ವಿಶ್ಲೇಷಣೆ

**ಅಧ್ಯಾಯ-6.** **ಅರಿವು - ಅರಿವೇ ಗುರು - ಮನಶ್ಶಕ್ತಿ.**

6-1. ಅರಿವು - ಅರ್ಥ ಮತ್ತು ವ್ಯಾಪ್ತಿ

6-2. ಮಾನವನ ಮಹೋನ್ನತಿ ಮನಶ್ಶಕ್ತಿಯಲ್ಲಿ

6-3. ಬಿಂಬ ಮತ್ತು ಬಿಂಬ ಕಲ್ಪನೆ (Image, Imagery Imagination)

6-4. ಮೌಲ್ಯಗಳನ್ನು ಬೆಳೆಸುವಿಕೆ - ಚಿಂತನ - ಮಂಥನ ಮಾನವನಿಗೆ ಅಗತ್ಯ ಗುಣ

6-5. पञ्चतन्त्रस्य तृतीयं तन्त्रम्- "काकेलूकीयम्"ಕಥೆಗಳ ವಿಶ್ಲೇಷಣೆ

**ಅಧ್ಯಾಯ-7.** **ಜೀವನ ಶಿಕ್ಷಣ**

7-1. ಜೀವನ ಶಿಕ್ಷಣ - ಉತ್ತಮ ಬದುಕಿಗೆ ಬೇಕಾದ ನೀತಿಬೋಧೆಗಳು

7-2. ವಿದ್ಯೆ - ಬುದ್ಧಿ - ಸಾಮಾನ್ಯ ಜ್ಞಾನ

7-3. ಮೌಢ್ಯ - ಪರಿಣಾಮ - ದೊರೆತುದರ ನಾಶ

7-4. पञ्चतन्त्रस्य चतुर्थं तन्त्रम् - "लब्धप्रणाशम्"ಕಥೆಗಳ ವಿಶ್ಲೇಷಣೆ

ಅಧ್ಯಾಯ–೮. **ಶೈಕ್ಷಣಿಕ ಮಾರ್ಗದರ್ಶನ ಮತ್ತು ಸಲಹೆ**

**(EDUCATIONAL GUIDANCE and COUNSELLING)**

೮–1. ಮಾರ್ಗದರ್ಶನ– (GUIDANCE)

ಅರ್ಥ ಮತ್ತು ವ್ಯಾಖ್ಯೆ –ವಿಧಗಳು – ಶೈಕ್ಷಣಿಕ – ವೃತ್ತಿ – ವೈಯಕ್ತಿಕ

೮–2. ಸಲಹೆ – ಸಮಾಲೋಚನೆ(COUNSELLING)

ಅರ್ಥ – ವ್ಯಾಖ್ಯೆ – ವಿಧಗಳು – ಬಳಕೆ

೮–3. ಸಾಮಾನ್ಯಜ್ಞಾನದ – ಕೊರತೆ – ಪರಿಣಾಮ

ಪರೀಕ್ಷಿಸದೆ ಕೆಲಸಮಾಡುವುದು – ಪರಿಣಾಮ.

पञ्चतन्त्रस्य पञ्चमं तन्त्रम्– "अपरीक्शितकारकम्"– ಕಥೆಗಳ ವಿಶ್ಲೇಷಣೆ

ಉಪಸಂಹಾರ

ಪರಾಮರ್ಶನ ಗ್ರಂಥಗಳು

ಅನುಬಂಧಗಳು

ವಿಷ್ಣುಶರ್ಮ ವಿರಚಿತ ಪಂಚತಂತ್ರ ನೀತಿಕಥೆಗಳಲ್ಲಿನ ಪಾತ್ರವರ್ಗ ವಿವರ

ಪಂಚತಂತ್ರದಲ್ಲಿನ ಕಥಾ ಸೂಚಿ

Details of the webinars/Seminars/

Workshops attended & papers presented

# ಉಪಸಂಹಾರ–ವಿಭಾಗ

**ಉಪಸಂಹಾರ**

**ಅನುಬಂಧ – 1.** ಸಹಾಯಕ ಗ್ರಂಥ ಸೂಚಿ :–

अ). ಮೂಲ ಗ್ರಂಥಗಳು

आ). ಪೂರಕ ಗ್ರಂಥಗಳು

इ). ಹಿಂದಿ ಭಾಷಾ ಗ್ರಂಥಗಳು

ई). ಕನ್ನಡ ಭಾಷಾ ಗ್ರಂಥಗಳು

उ). ಆಂಗ್ಲ ಭಾಷಾ ಗ್ರಂಥಗಳು

ऊ). ಪತ್ರಿಕೆಗಳು

ए). ಸಂಕ್ಷೇಪಗಳು

**ಅನುಬಂಧ–2.** ಸಂಗ್ರಹಿಸಿದ ಕೆಲವು ಚಿತ್ರಗಳು

# ಪ್ರಾಸ್ತಾವಿಕ ವಿಭಾಗ

## ಪ್ರಸ್ತಾವನೆ

मनसि वचसि काये पुण्यपीयूषपूर्णा त्रिभुवनं उपकार श्रेणिभिः प्रीणयन्तः।

परगुणपरमाणून् पर्वतीकृत्य नित्यं निजहृदि विकसन्तः सन्ति सन्तः कियन्तः ॥[1]

ಮನಸ್ಸು, ಮಾತು, ದೇಹಗಳಲ್ಲಿ ಸತ್ಕೃತಿಗಳೆಂಬ ಅಮೃತವನ್ನು ತುಂಬಿಕೊಂಡು ಪರೋಪಕಾರಗಳ ಸರಣಿಯಿಂದ ಮೂರೂ ಜಗತ್ತುಗಳನ್ನು ಖುಷಿಪಡಿಸುವ, ಪರರ ಸಣ್ಣ ಗುಣಗಳನ್ನೂ ಬೆಟ್ಟದಷ್ಟು ದೊಡ್ಡದಾಗಿ ತೋರಿಸುವ, ಯಾವಾಗಲೂ ತಮ್ಮ ಹೃದಯಗಳಲ್ಲಿ ಸಂತುಷ್ಟರಾಗಿರುವ ಸಜ್ಜನರು ಎಷ್ಟಿದ್ದಾರೆ.

ಸಕಲ ಜೀವಿಗಳಲ್ಲಿ ಮನುಷ್ಯ ಜನ್ಮವೇ ಶ್ರೇಷ್ಠವಾದದ್ದು. ಮನುಷ್ಯನಿಗೆ ಮಾತ್ರ ಬುದ್ಧಿ ಶಕ್ತಿ, ಯೋಚನಾ ಶಕ್ತಿ ಮತ್ತು ಮಾತನಾಡುವ ಶಕ್ತಿ. ಇಷ್ಟಲ್ಲದೆ ಅವುಗಳನ್ನು ಕಾರ್ಯರೂಪಕ್ಕೆ ತರುವ ಇಚ್ಛಾಶಕ್ತಿ, ಕ್ರಿಯಾಶಕ್ತಿ ಮತ್ತು ಜ್ಞಾನಶಕ್ತಿ ಇರುವುದು. ಆದ್ದರಿಂದ ಈ ಜನ್ಮದ ಶ್ರೇಷ್ಠತೆಯನ್ನು ಮಾನವ ಅರ್ಥಮಾಡಿಕೊಂಡು ಇದರಲ್ಲಿ ಸಾರ್ಥಕತೆ ಹೊಂದಬೇಕು. ಮನುಷ್ಯ ಇತರ ಮಾನವರೊಂದಿಗೆ,ಸಮಾಜದೊಂದಿಗೆ ಮತ್ತು ಪ್ರಕೃತಿಯೊಂದಿಗೆ ಬದುಕಿದರೆ ಜೀವನ ಪಾವನವಾಗುವುದು. ಹೀಗೆ ಮಾನವ ಜನಾಂಗದ ಭವಿಷ್ಯವನ್ನು ರೂಪಿಸುವಲ್ಲಿ ಮತ್ತು ಪರಿಸರವನ್ನವಲಂಬಿಸಿ ವ್ಯಕ್ತಿಯ ಬಹುಮುಖವಾದ ವ್ಯಕ್ತಿತ್ವವನ್ನು ವಿಕಾಸಗೊಳಿಸಲು ಶಿಕ್ಷಣದ ಪಾತ್ರವು ಮಹತ್ತರವಾದುದಾಗಿದೆ. ಉತ್ತಮ ಶಿಕ್ಷಣದಿಂದ ವ್ಯಕ್ತಿಯ ಶಾರೀರಿಕ, ಮಾನಸಿಕ, ಬೌದ್ಧಿಕ, ಭಾವನಾತ್ಮಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಶಕ್ತಿಗಳ ಪೂರ್ಣ ವಿಕಾಸ ಉಂಟಾಗುತ್ತದೆ.[2]

ಈ ಒಂದು ಬೆಳವಣಿಗೆ ಮತ್ತು ವಿಕಾಸಕಾರ್ಯದಲ್ಲಿ ಶೈಕ್ಷಣಿಕ ಮಾರ್ಗದರ್ಶನದ ಆಧಾರ ಸ್ಥಂಭವೇ ಗುರುವಿನ ಪಾತ್ರವೆನ್ನಬಹುದು. ಅತಿ ಪ್ರಾಚೀನ ಕಾಲದಿಂದಲೂ ಭಾರತವು ಸನಾತನ ಸಂಸ್ಕೃತಿಗೆ ಇಡೀ ಜಗತ್ತಿಗೇ ಕೈದೀವಿಗೆಯಾಗಿರುತ್ತದೆ. ಜ್ಞಾನರವಿಯ ಕಿರಣಗಳು ಪೌರ್ವಾತ್ಯ ರಾಷ್ಟ್ರಗಳಿಂದಲೇ ಪಶ್ಚಿಮಕ್ಕೆ ಪ್ರಸಾರವಾದವು. ಅಂದಿನ ಜನರ ದೈಹಿಕ, ಮಾನಸಿಕ ಮತ್ತು ನೈತಿಕ ಮಟ್ಟವು ಅಪೇಕ್ಷಿತ ಸ್ಥಿತಿಯಲ್ಲಿದ್ದು ಸಮಾಜದಲ್ಲಿ ಸ್ಥಿರತೆಯಿತ್ತು. ಸಹಕಾರ ಮತ್ತು ಸೌಹಾರ್ದತೆ ನೆಲೆಸಿತ್ತು. ಆ ಕಾಲದಿಂದಲೂ ಗುರುವಿಗೆ ಶ್ರೇಷ್ಠಸ್ಥಾನವಿತ್ತು. ಸರಳ ಜೀವನ, ಉದಾತ್ತ ವಿಚಾರಗಳು, ವಿದ್ಯಾರ್ಜನೆ,

---

1. **ಭರ್ತೃಹರಿಯ ನೀತಿಶತಕ,** ಪರೋಪಕಾರ ಪದ್ಧತಿ – ಶ್ಲೋಕ– 78
2. **ವಾಮದೇವಪ್ಪ ಹೆಚ್. ವಿ.** ಶೈಕ್ಷಣಿಕ ಮನೋಜ್ಞಾನ, ಪೀ– ಪುಟ–6,
   ಶ್ರೇಯಸ್ ಪಬ್ಲಿಕೇಷನ್ಸ್, (2018) ತರಳಬಾಳು ಬಡಾವಣೆ, ದಾವಣಗೆರೆ – 577 005

ಸತ್ಯಾನ್ವೇಷಣೆ, ವೈಯಕ್ತಿಕ ಮತ್ತು ಸಾಮಾಜಿಕ ಜೀವನದಲ್ಲಿ ಮೇಲ್ಮಟ್ಟದ ನೀತಿತತ್ವಗಳ ಆಚರಣೆ-ಇವುಗಳೇ ಗುರುವಿನ ಜೀವನದ ಜೀವಾಳವಾಗಿದ್ದವು. ಇವುಗಳಿಂದಾಗಿ ಪ್ರಾಚೀನ ದೇಶದಲ್ಲಿ ಗುರುವು ಶ್ರೇಷ್ಠ ಸ್ಥಾನವನ್ನುಗಳಿಸಿ, ಉಳಿಸಿಕೊಂಡು ಬಂದಿದ್ದಾರೆ.[3] ವೃತ್ತಿ ಘನತೆ, ಅಪಾರಶ್ರದ್ಧೆ, ವಿದ್ವತ್ತು, ದೃಢವಾದ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ, ಬೋಧನಾ-ಕೌಶಲ್ಯ, ಸತ್ಯಸಂಧತೆ ಮುಂತಾದ ವಿಚಾರಗಳಲ್ಲಿ ಪರಿಣಿತರಾದ ಅನೇಕ ಗುರುಗಳನ್ನು ಕಾಣಬಹುದು. ಅಂಥಹವರ ಸಾಲಿನಲ್ಲಿ-ಆದರ್ಶ, ಪ್ರತಿಭಾನ್ವಿತ, ಹಿರಿಯ ಅನುಭವೀ ಶಿಕ್ಷಕರಾದ ಪಂಡಿತ 'ವಿಷ್ಣುಶರ್ಮರ' ಬಗ್ಗೆ ಹಾಗೂ ಅವರು ರಚಿಸಿದ ಅಪೂರ್ವ ನೀತಿಶಾಸ್ತ್ರ ಕೃತಿ 'ಪಂಚತಂತ್ರದ' ವಿಚಾರದಲ್ಲಿ ಅಧ್ಯಯನ ಮಾಡುವುದೆಂದರೆ, ಸಂಸ್ಕೃತ ಸಾಹಿತ್ಯಪ್ರಿಯ ವಿದ್ಯಾರ್ಥಿಗಳಿಗೆ ಒಂದು ಸಂತಸದ ವಿಷಯ. ಅದರಲ್ಲೂ ಶಿಕ್ಷಣಕ್ಷೇತ್ರದಲ್ಲಿ ಭೋಧನಾ ವೃತ್ತಿಯಲ್ಲಿ ತೊಡಗಿಸಿಕೊಂಡಿರುವವರಿಗೆ ಮತ್ತು ವೃತ್ತಿಶಿಕ್ಷಣ ಮಾರ್ಗದರ್ಶನ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವವರಿಗೆ ಆದರ್ಶ ಪ್ರಾಯವಾದುದು. ಉತ್ತಮ ಕಥಾನಿರೂಪಣಾ ಬೋಧನಾ ಮಾಧ್ಯಮವನ್ನನುಸರಿಸಿ, ಕಲಿಕಾ ಆಸಕ್ತಿಯನ್ನು ಪ್ರಚೋದಿಸಿ, ಉತ್ತಮ ಸನ್ನಿವೇಶಗಳನ್ನೊದಗಿಸಿ, ಜ್ಞಾನಬೋಧನೆಯ ಜೊತೆಗೆ ಚಟುವಟಿಕೆಗಳ ಮೂಲಕ ಶೀಲಸಂಪನ್ನತೆ, ಸ್ವಾವಲಂಬನೆ, ಶಾರೀರಿಕ ದುಡಿಮೆಯಲ್ಲಿ ಆಸಕ್ತಿಮೂಡಿಸಿ, ಉತ್ತಮಪೌರರೂ, ರಾಜನೀತಿ ನಿಪುಣರೂ, ಸಮಾಜ ಸೇವಾಕಾಂಕ್ಷಿಗಳು, ಬದುಕಿನನೀತಿ ಬಲ್ಲವರಾಗುವಂತೆ ಪ್ರೇರೇಪಿಸಿ, ಮಂದಮತಿಗಳನ್ನು ಸುಜ್ಞಾನಮತಿಗಳನ್ನಾಗಿ ಪರಿವರ್ತಿಸಿ, ಸುಂದರ ವ್ಯಕ್ತಿ ನಿರ್ಮಾಣ ಮಾಡುವ ಸಾಧನೆ ನಿಜಕ್ಕೂ ಅಪೂರ್ವ ಹಾಗೂ ಅದ್ವಿತೀಯವಾದುದು. ಪಂಚತಂತ್ರದ ಮೂಲಕ ಇಂಥಹ ಸಾಧನೆಗೈದವರೇ ಈ ವಿಷ್ಣುಶರ್ಮರು.

ಪಂಚತಂತ್ರವು ಆ ಪ್ರಾಚೀನ ಕಾಲದಲ್ಲಿಯೇ ಪರಿಣಾಮಕಾರಿಯಾದ ಶೈಕ್ಷಣಿಕ ಮನೋವಿಜ್ಞಾನದ ಅನೇಕ ಪರಿಕಲ್ಪನೆಗಳನ್ನು ನೀತಿಶಿಕ್ಷಣದಲ್ಲಿ ಅಳವಡಿಸಿಕೊಂಡಿತ್ತು. 'ಶೀಲ-ಸಚ್ಚಾರಿತ್ರ್ಯವಿಲ್ಲದ ಶಿಕ್ಷಣ, ಸಮಾಜ ಘಾತುಕ'ಎಂದು ಗಾಂಧೀಜಿಯವರು ಸಾರಿದ್ದಾರೆ. ಶಿಕ್ಷಿತರೆಂದು ಹೇಳಿಕೊಳ್ಳುವವರು ಅನೀತಿವಂತರಾದರೆ ಅವರ ಬುದ್ಧಿ-ಜ್ಞಾನಗಳೆಲ್ಲ ತಪ್ಪುದಾರಿ ಹಿಡಿದು ಜನರಿಗೆ ಹಾಗೂ ಸಮಾಜಕ್ಕೆ ಅದರಿಂದ ಕೇಡುಂಟಾಗುತ್ತದೆ. ಆದ್ದರಿಂದ ಶಿಕ್ಷಕನಾದವನು ತಾನು ಕಲಿಸಬೇಕಾದ ವಿಷಯದಲ್ಲಿ ಪಾರಂಗತನಾಗಿರಬೇಕು. ಬೋಧಿಸುವಕ್ರಮ- ವಿಧಾನಗಳನ್ನು ಅರಿತಿರಬೇಕು, ವಿದ್ಯಾರ್ಥಿಗಳ ನಡತೆ, ಬುದ್ಧಿಶಕ್ತಿ, ವರ್ತನೆ, ಆಸಕ್ತಿ ಇತ್ಯಾದಿಗಳ ಬಗ್ಗೆ ಪರಿಶೀಲಿಸುವ ಪರಿಜ್ಞಾನ ಇರಬೇಕು. ಶಿಕ್ಷಣ ಸಾಧನಗಳು, ಶಿಕ್ಷಣಕ್ರಮ, ಪರೀಕ್ಷಾ ತಂತ್ರಗಳು, ಮೌಲ್ಯಮಾಪನ ಇವುಗಳ ಬಗ್ಗೆ ವಿಶೇಷ ಜ್ಞಾನವಿರಬೇಕು-ಎಂಬೆಲ್ಲ ವೈಜ್ಞಾನಿಕ ಕ್ರಮಗಳನ್ನು ಶೈಕ್ಷಣಿಕ ಮನೋವಿಜ್ಞಾನವು ಸೂಚಿಸುತ್ತದೆ. ಪಂಚತಂತ್ರವು ಈ ಎಲ್ಲ ಆದರ್ಶಗಳನ್ನು ಬಹಳ ಅಚ್ಚುಕಟ್ಟಾಗಿ ನಿರೂಪಿಸುತ್ತದೆ.

ಸಾಮಾನ್ಯ ವಿಜ್ಞಾನಗಳಂತೆ ಮನೋವಿಜ್ಞಾನಕ್ಕೆ ಎರಡು ಮುಖ್ಯ ಅಂಶಗಳಿವೆ. 1-ಶುದ್ಧ ಅಥವಾ ಶಾಸ್ತ್ರೀಯ-ವಿಜ್ಞಾನ, 2-ಅನ್ವಯಿಕ-ವಿಜ್ಞಾನ. ಶೈಕ್ಷಣಿಕ-ಮನೋವಿಜ್ಞಾನವು ಅನ್ವಯಿಕ ಮನೋವಿಜ್ಞಾನದ ಒಂದು ಶಾಖೆ. ಅಂದರೆ, ಮನೋವಿಜ್ಞಾನದ ಜ್ಞಾನವನ್ನು ಶೈಕ್ಷಣಿಕ ಕ್ಷೇತ್ರಕ್ಕೆ ಅನ್ವಯಿಸುವ ಪ್ರಯತ್ನ.

ಈ ಮಹಾಪ್ರಬಂಧದಲ್ಲಿ ಅನ್ವಯಿಕ ಮನೋವಿಜ್ಞಾನದ ಒಂದು ಶಾಖೆಯಾಗಿರುವ ಶೈಕ್ಷಣಿಕ ಮನೋವಿಜ್ಞಾನದ, ಸಾಮಾನ್ಯವಾಗಿ ಅನುಭವಗಳಿಂದ ಕಂಡುಕೊಂಡ ಪರಿಕಲ್ಪನೆಗಳನ್ನು ಮಾತ್ರ ಅನ್ವಯಿಸಿ ಸಂಶೋಧನಾ ಕಾರ್ಯ ನಡೆಸಲಾಗಿದೆ. ಮೂಲ ಶುದ್ಧ ಅಥವಾ ಶಾಸ್ತ್ರೀಯ ಮನೋವಿಜ್ಞಾನವನ್ನಲ್ಲ. ಶಿಕ್ಷಣ-ವ್ಯವಸ್ಥೆಯಲ್ಲಿ ಮನೋ-ವಿಜ್ಞಾನದ ಅವಿನಾಭಾವ ಸಂಬಂಧ ಏನಿದೆಯೋ, ಅದನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಣೆ ಮಾಡಲಾಗಿದೆ. ಇಲ್ಲಿ ಶಿಕ್ಷಣ ಪ್ರಕ್ರಿಯೆಯಲ್ಲಿ-ಶಿಕ್ಷಕನ- ಪಾತ್ರ, ಅವನ- ಘರ್ಷಣೆಗಳು, ಆತಂಕ, ಮಹತ್ವಾಕಾಂಕ್ಷೆ, ಪ್ರೇರಣೆ, ಗುರುಶಿಷ್ಯರ- ಬಾಂಧವ್ಯ, ಪರಾನುಭೂತಿ, ಸೇವಾ-ಮನೋಭಾವನೆ, ವೃತ್ತಿನಿಷ್ಠೆ-ಗೌರವ-ಇತ್ಯಾದಿಗಳ ಬಗ್ಗೆ ಗುರುತಿಸಲಾಗಿದೆ.

ಪರಿಣಾಮಕಾರಿ-ಬೋಧನೆ, ಜೀವನ- ಶಿಕ್ಷಣ, ಉತ್ತಮ ಬದುಕಿಗೆ ನೀತಿಪಾಠ-ಜಾಗೃತಿ, ಸಲಹೆ-ಮಾರ್ಗದರ್ಶನ, ಅಗತ್ಯವ್ಯಕ್ತಿತ್ವ-ನಿರ್ಮಾಣ, ಚಹರೆಗಳು, ಆಸಕ್ತಿಗಳು, ಗುಣಲಕ್ಷಣಗಳು-ಇವುಗಳ ಮೇಲೆ ಬೆಳಕು ಚೆಲ್ಲುವುದಾಗಿದೆ.

---

3. ಸಂಪದ್ಗಿರಿ ರಾಯರು, ನಿ. ಪ್ರಾ., ಗೋಕಾಕ್ ವಿ. ಕೆ., ಉ. ಕು. ಬೆಂ. ವಿವಿ, ಮೈಸೂರು ರಾಜ್ಯ ಎಜುಕೇಷನ್ ಫೆಡರೇಷನ್, 22ನೇ ಶಿಕ್ಷಣ ಮಹಾಸಮ್ಮೇಳನದಲ್ಲಿ ಹೊರಡಿಸಿದ ಸವನೀರ್. ಪುಟ - 22, 24, 26.(1969)

## ವಿಷಯದ ಆಸಕ್ತಿ ಮತ್ತು ಉದ್ದೇಶ

ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಅಧ್ಯಯನ ಮಾಡುತ್ತಿರುವ, ಅದರಲ್ಲೂ ಸ್ನಾತಕೋತ್ತರ ಪದವಿ ತರಗತಿಯಲ್ಲಿ ವ್ಯಾಸಂಗ ನಡೆಸುತ್ತಿದ್ದ ಸಂದರ್ಭದಲ್ಲಿಯೇ ಭಾರತೀಯ ಕಥಾಸಾಹಿತ್ಯವು ವಿಶ್ವಸಾಹಿತ್ಯ ಪ್ರಪಂಚದಲ್ಲಿ ಎಂಥಹ ಉತ್ಕೃಷ್ಟ ಸ್ಥಾನ ಪಡೆದಿದೆ ಎಂದು ತಿಳಿದಾಗ ಒಂದು ವಿಶೇಷ ಅಧ್ಯಯನ ಮಾಡುವ ಆಸಕ್ತಿ ಮೂಡಿತ್ತು.

ಭಾರತೀಯ ಕಥಾಸಾಹಿತ್ಯವು ವಿಶ್ವ ಕಥಾಸಾಹಿತ್ಯದ ಜನಕನೆಂದೂ ಪರಿಗಣಿಸಲಾಗಿದೆ. ಇದರಲ್ಲಿ ಭಾರತೀಯ ಜನಜೀವನ, ಸಂಸ್ಕೃತಿ, ವಿಚಾರಧಾರೆ, ಕಾರ್ಯಕಲಾಪ ಮತ್ತು ನೈತಿಕತೆಯ ಪರಕಾಷ್ಠತೆ ಪ್ರಕಟವಾಗುವುದು. ವೇದಗಳ ಕಾಲದಿಂದಲೂ ಕಥೆಗಳ ನಿರೂಪಣೆ ಬಳಕೆಯಲ್ಲಿದ್ದು, ಉಪನಿಷತ್ತುಗಳಲ್ಲೂ ಇದನ್ನು ಕಾಣಬಹುದು. 'ಕಥೆಗಳ ಮೂಲಕ ಶಿಕ್ಷಣ ನೀಡುವುದು ಭಾರತದ ವೈಶಿಷ್ಟ್ಯ'ಎಂದು **WILLIAM JONES** ಎಂಬ **Anglo-Welsh Philologist** ರವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕ್ರಿ.ಪೂ.ದಷ್ಟು ಪ್ರಾಚೀನವಾದ ಕಥೆಗಳು ಭಾರತದಿಂದ ಯೂರೋಪಿನ ನಾನಾ ಭಾಗಗಳಿಗೆ ಬಂದಿವೆಯೆಂದು ಪಾಶ್ಚಾತ್ಯ ವಿಮರ್ಶಕರೂ ಅಭಿಪ್ರಾಯಪಟ್ಟಿರುತ್ತಾರೆ.[4] ಅಷ್ಟಾಗಿ ಪಂಚತಂತ್ರದ ಬಗ್ಗೆ ಪೂರ್ಣ ಅರಿವಿಲ್ಲದಿದ್ದಾಗ, ಇದು ಕೇವಲ ಮಕ್ಕಳ ಮನರಂಜನೆಗಾಗಿರುವ 'ಕಥಾಸಂಕಲನ' ಎಂಬ ಸಾಮಾನ್ಯ ಅಭಿಪ್ರಾಯವಿದ್ದಿತು.

ಆದರೆ ಸೂಕ್ಷ್ಮವಾಗಿ ಗಮನಿಸಿದಾಗ ಅದರ ವಿಶ್ವವ್ಯಾಪಿ ಜನಪ್ರಿಯತೆ, ಅದರಲ್ಲೂ ಬೈಬಲನ್ನು ಬಿಟ್ಟರೆ, ಪ್ರಪಂಚದಲ್ಲೇ ಅತ್ಯಂತ ಹೆಚ್ಚು ಪ್ರಕಟಣೆಗಳನ್ನು ಕಂಡಿರುವ ಜನಪ್ರಿಯ ಗ್ರಂಥವೆಂದರೆ ಅದು ಪಂಚತಂತ್ರವೆ. ವಿಶ್ವದ ಐವತ್ತಕ್ಕೂ ಹೆಚ್ಚುಭಾಷೆಗಳಲ್ಲಿ ಸುಮಾರು ಇನ್ನೂರೈವತ್ತು ಪಂಚತಂತ್ರ ಸಂಸ್ಕರಣಗಳು ಪ್ರಕಾಶಗೊಂಡಿವೆ.[5] ಎಂದೆಲ್ಲ ತಿಳಿದಾಗ ಪಂಚತಂತ್ರವನ್ನು ಇನ್ನೂ ಹೆಚ್ಚು ಆಳವಾದ ಅಧ್ಯಯನ ನಡೆಸಿ ಈ ಕೃತಿಯ ವಿಶೇಷತೆಯ ಬಗ್ಗೆ ಏನಾದರೊಂದು ಶೋಧನಾತ್ಮಕ ಕಾರ್ಯಕೈಗೊಳ್ಳಲು ಆಲೋಚನೆ ಅಂಕುರಗೊಂಡಿತು. ಹಾಗೆಯೇ ಪಂಚತಂತ್ರ ನೀತಿಕಥೆಗಳ ಭೂಮಿಕೆಯಲ್ಲಿ ಪ್ರಕಟವಾಗಿರುವಂತೆ– ಅಮರಶಕ್ತಿ ರಾಜನ ಮೂವರು ಪುತ್ರರು– ಮೂರ್ಖ, ಆಲಸಿ, ಬುದ್ಧಿಶೂನ್ಯರು ಎಂಬುದನ್ನು ಗಮನಿಸಿ, ರಾಜನ ಕೋರಿಕೆಯನ್ನು ಪುರಸ್ಕರಿಸಿ, ಅರಸು ಕುಮಾರರ ಸ್ಥಿತಿಗತಿಗಳನ್ನು ಗ್ರಹಿಸಿ, ಕಲಿಕೆಗೇ ನಿರಾಸಕ್ತರಾಗಿದ್ದ, ಸ್ವೇಚ್ಛೆಯಿಂದ ಕಾಲಕಳೆಯುತ್ತಿದ್ದ ಅವರನ್ನು ಕೇವಲ ಆರುತಿಂಗಳಲ್ಲಿ ಸುಶಿಕ್ಷಿತರನ್ನಾಗಿ ಪರಿವರ್ತಿಸಿ, ರಾಜನೀತಿ ಶಿಕ್ಷಣ, ಜೀವನ ಶಿಕ್ಷಣ ನೀಡಿದ ಪ್ರತಿಭಾವಂತ ಶಿಕ್ಷಕ ಪಂಡಿತ ವಿಷ್ಣುಶರ್ಮರ ಸಾಧನೆ ಅಸಾಧಾರಣವಾದುದು, ಆದರ್ಶಪ್ರಾಯವಾದುದು.

ಮೇಧಾವಿ ಶಿಕ್ಷಕರಾದ ವಿಷ್ಣುಶರ್ಮರು ಈ ದುರ್ವಿನೀತ ರಾಜಕುಮಾರರಿಗೇನನ್ನು ಬೋಧಿಸಬೇಕು? ಯಾವಾಗ ಬೋಧಿಸಬೇಕು? ಹೇಗೆ ಬೋಧಿಸಬೇಕು? ಅದೇರೀತಿ ಅವರುಗಳು ಏನನ್ನು ಕಲಿಯಬೇಕು? ಏಕೆ ಕಲಿಯಬೇಕು? ಹೇಗೆಕಲಿಯಬೇಕು?[6] ಎಂಬುದನ್ನೆಲ್ಲ ವಿಶ್ಲೇಷಣೆಗೈದು ದೃಢ ಸಂಕಲ್ಪದೊಂದಿಗೆ ವಿಶಿಷ್ಟವಾದ ಪಂಚತಂತ್ರಗಳನ್ನು ಅಳವಡಿಸಿ, ಅದರಲ್ಲಿ ಸೂಕ್ತವಾದ ಅತ್ಯಾಕರ್ಷಕ ಸರಣಿ ಕಥೆಗಳನ್ನು ಹೆಣೆದು, ಪ್ರತಿಯೊಂದು ಕಥೆಗೂ ಒಂದು ರಾಜನೀತಿ ಮತ್ತು ಜೀವನಾದರ್ಶ ನೀತಿಪಾಠವನ್ನು ಲೇಪಿಸಿ ಪಠ್ಯಕ್ರಮ ರಚಿಸಿದ್ದಾರೆ. ರಾಜಕುಮಾರರ ಆಸಕ್ತಿಯನ್ನು, ಕುತೂಹಲವನ್ನು ಕೆರಳಿಸಿ, ಕಲಿಯುವಿಕೆಯಲ್ಲಿ ಪ್ರೀತಿಯನ್ನು ಬೆಳೆಸಿ, ಅವರಿಗೆ ಸೂಕ್ತವಾದ ಬೋಧನಾ ಮಾಧ್ಯಮವನ್ನು ಗುರುತಿಸಿ, ಅವರ ಮನಸ್ಸುಗಳನ್ನರಿತು ಶಿಕ್ಷಣವನ್ನು ನೀಡಿದರು. ಇವುಗಳೇ ಸಾಮಾನ್ಯ ಶೈಕ್ಷಣಿಕ ಮನೋವಿಜ್ಞಾನದ ಕ್ರಮ, ನೀತಿ– ನಿಯಮಗಳು, ಸಲಹೆ–ಸೂಚನೆಗಳು–ಹೀಗೆ ಪಂಡಿತ ವಿಷ್ಣುಶರ್ಮರ ಸೃಜವಾದ ಶೈಕ್ಷಣಿಕ ಮನೋವಿಜ್ಞಾನದ ಕೌಶಲ್ಯ, ವ್ಯಕ್ತಿ ನಿರ್ಮಾಣ ಕಲೆ–ಇವುಗಳನ್ನು ಪಂಚತಂತ್ರದ ಸಮಗ್ರ ಅಧ್ಯಯನದೊಂದಿಗೆ ಸಂಶೋಧನಾ ವಿಷಯ ಪ್ರವೇಶ ಮಾಡಲಾಗಿದೆ.

---

4. **Da. Rhys David's Ottokeller,** ಅರೇಬಿಯನ್ ನೈಟ್ಸ್, ಈಸೋಪನ ಕಥೆಗಳ ಮೇಲೆ ಪ್ರಭಾವ ಬೀರಿದೆ.
5. **ಸುಧಾಕರ ಮಾಳವೀಯ**, ಅನು. ವ್ಯಾ– ಶ್ರೀ ವಿಷ್ಣುಶರ್ಮ ವಿರಚಿತಂ ಪಂಚತಂತ್ರಮ್, ಭೂ–ಪು– 31, ಚೌಕಾಂಬಾ ಕೃಷ್ಣದಾಸ್ ಅಕಾಡೆಮಿ, ವಾರಣಾಸಿ – 221 001(1993)
6. **ವಾಮದೇವಪ್ಪ ಹೆಚ್. ವಿ.** –ಶೈಕ್ಷಣಿಕ ಮನೋವಿಜ್ಞಾನ – 2005, ಶ್ರೇಯಸ್ ಪಬ್ಲಿಕೇಷನ್ಸ್, ತರಳಬಾಳು ಬಡಾವಣೆ – ದಾವಣಗೆರೆ 577 005

## ವಿಷಯದ ವ್ಯಾಪ್ತಿ ಮತ್ತು ಪ್ರಯೋಜನ

ನೀತಿಯನ್ನು ಜನಪ್ರಿಯಗೊಳಿಸುವ, ಜನರಿಗೆ ಆಪ್ಯಾಯಮಾನವಾಗಿ ಕಥಾಮಾಧ್ಯಮದಿಂದ ಸರಳವಾಗಿ ಹೇಳುವ ಸದುದ್ದೇಶದಿಂದ ಹುಟ್ಟಿಕೊಂಡ ಕಾವ್ಯ ಪ್ರಕಾರವೇ ನೀತಿಕಾವ್ಯ. ನೀತಿ ಬೋಧೆಯೇ ಇವುಗಳ ಮುಖ್ಯ ಧ್ಯೇಯ. ಇಲ್ಲಿ ವಿಧಿಯಾಗಲಿ, ನಿಷೇಧವಾಗಲೀ ಇಲ್ಲ. ನೀತಿ ಉಪದೇಶ, ತತ್ವಬೋಧನೆಗಳಿದ್ದರೂ ಶುಷ್ಕ ಅಥವಾ ಹೊರೆ ಎನಿಸುವುದಿಲ್ಲ. ನೇರ-ನಿರೂಪಣೆ, ಸರಳವಾದ ಭಾಷೆ, ಮೃದುಮಧುರ ಪದಗಳ ಬಳಕೆ, ಮನಸ್ಸನ್ನು ಹಿಡಿದಿಟ್ಟುಕೊಳ್ಳುವ ರಚನಾ ಕ್ರಮ, ಸುಲಭ ಶೈಲಿ ಮುಂತಾದ ಗುಣಗಳೇ ನೀತಿಕಾವ್ಯಗಳ ಜನಪ್ರಿಯತೆಯ ರಹಸ್ಯ.[7] ನೀತಿ ಕಾವ್ಯಗಳ ಸಾಲಿನಲ್ಲಿ ಅತ್ಯಂತ ಜನಪ್ರಿಯ ಕೃತಿಗಳೆಂದರೆ ಪಂಚತಂತ್ರ ಮತ್ತು ಹಿತೋಪದೇಶ. ಇಲ್ಲಿ ಪ್ರಾಣಿಪಶುಪಕ್ಷಿಗಳ ಕಥೆಗಳ ಮೂಲಕ ರಾಜನೀತಿ ವ್ಯಕ್ತಿನೀತಿಗಳನ್ನು ಬೋಧನೆ ಮಾಡಲಾಗಿದೆ. ಇಲ್ಲಿನ ಕಥೆಗಳಲ್ಲಿ ಮನುಷ್ಯನ ಸ್ವಭಾವ, ಮನೋಧರ್ಮ, ಮಾತುಕಥೆ, ನಡತೆಗಳನ್ನು ಪ್ರಾಣಿಗಳಿಗೆ ಆರೋಪಿಸಲಾಗಿದೆ. ಇದು ಬೋಧನೆಯಲ್ಲಿ ಮತ್ತು ಪಠ್ಯ ರಚನೆಯಲ್ಲಿ ಒಂದು ವಿಶೇಷ ತಂತ್ರಗಾರಿಕೆ. ಪ್ರಾಣಿ-ಪಶುಪಕ್ಷಿಗಳು ಮನುಷ್ಯನಂತೆ ವರ್ತಿಸುತ್ತವೆ, ಮಾತನಾಡುತ್ತವೆಂಬುದೇ ಒಂದು ಕುತೂಹಲ ಹಾಗೂ ಗಮನ ಸೆಳೆಯುವ ಗುಟ್ಟು.

ರಾಜಕುಮಾರರನ್ನು ಕೇವಲ ಆರೇ ತಿಂಗಳುಗಳಲ್ಲಿ ನೀತಿಜ್ಞರನ್ನಾಗಿ ಮಾಡಲು ದೃಢ ಸಂಕಲ್ಪ ಮಾಡಿದ ನೀತಿ ಸಂಪನ್ನರಾದ ವಿಷ್ಣುಶರ್ಮರು ತಮ್ಮ ಪ್ರತಿಭೆಯಿಂದ ಅವರನ್ನು ಅಲ್ಪಾವಧಿಯಲ್ಲಿಯೇ ವ್ಯವಹಾರ ಕುಶಲಿಗಳು ಹಾಗೂ ಸದಾಚಾರಸಂಪನ್ನರನ್ನಾಗಿ ಮಾಡುತ್ತಾರೆ. ರಾಜನು ವಿಷ್ಣುಶರ್ಮರ ಅದ್ಭುತ ಸಾಧನೆಗೆ ಬಹಳ ಸಂತೋಷ ಪಟ್ಟು ಸೂಕ್ತ ಬಹುಮಾನವನ್ನು ಕೊಡುವುದಾಗಿ ರಾಜನು ಘೋಷಿಸಿದಾಗ

नाहं विद्याविक्रयं शासनशतेनापि करोमि ।
किन्तु त्वत्प्रार्थना सिध्यर्थ सरस्वती विनोदं करिष्यामि ॥[8]

ತನ್ನ ವಿದ್ಯೆಯನ್ನು ಹಣಕ್ಕಾಗಿ ಮಾರುವುದಿಲ್ಲವೆಂದೂ, ಆದರೆ ಸರಸ್ವತೀ ವಿನೋದಕ್ಕಾಗಿ ಆ ಕೆಲಸವನ್ನು ನಾನು ಛಲದಿಂದ ಮಾಡಿರುವುದಾಗಿ ವಿಷ್ಣುಶರ್ಮರು ತಿಳಿಸಿರುತ್ತಾರೆ. ಇದರಿಂದ ಇವರ ವೃತ್ತಿ ಘನತೆ, ಗೌರವ, ಶ್ರದ್ಧಾಭಕ್ತಿ ಎಷ್ಟಿತ್ತೆಂಬುದನ್ನು ಗುರುತಿಸಬಹುದು. ಯಾವುದೇ ಫಲಾಪೇಕ್ಷೆಯಿಲ್ಲದೆ ಸರಸ್ವತಿಯ ಸೇವೆಗಾಗಿಯೇ ಈ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆಂದು ಹೇಳಬಹುದು. ಇದು ನಿಜಕ್ಕೂ ಒಬ್ಬ ಪ್ರತಿಭಾವಂತ ಶಿಕ್ಷಕನ ಆದರ್ಶಗುಣವನ್ನು ಪ್ರತಿಬಿಂಬಿಸುತ್ತದೆ.

ಪಂಚತಂತ್ರದಲ್ಲಿ ಪ್ರಧಾನವಾಗಿ ಉಲ್ಲೇಖಗೊಂಡಿರುವ ವಿಚಾರಗಳೆಂದರೆ[9] -ರಾಜಧರ್ಮ: ಇದು ನೇರವಾಗಿ ರಾಜಕುಮಾರರಿಗೆ ರಾಜನೀತಿ ಶಿಕ್ಷಣವನ್ನು ಒದಗಿಸಲು ಸಿದ್ಧಪಡಿಸಿದ ಪಠ್ಯ ಭಾಗವೆನಿಸಿರುವುದರಿಂದ ಸಹಜವಾಗಿಯೇ ರಾಜಧರ್ಮದ ವಿಚಾರಗಳಿವೆ. ರಣತಂತ್ರ:-ಶತ್ರುಗಳ ನಿಗ್ರಹಣ ಹೇಗೆ ಎಂಬುದಕ್ಕೆ ಕಾಕೋಲೂಕೀಯ ತಂತ್ರವನ್ನು ವಿಶೇಷವಾಗಿ ರಚಿಸಲಾಗಿದೆ. ಸ್ನೇಹ ಅಥವಾ ಮಿತ್ರತ್ವ:-ಪಂಚತಂತ್ರದ ಮೊದಲೆರಡು ತಂತ್ರಗಳನ್ನು ಈ 'ಮಿತ್ರಂ'ಎಂಬ ಪದವನ್ನು ಒಳಗೊಂಡಂತೆಯೇ ರಚಿಸಲಾಗಿದೆ. ಮಿತ್ರಭೇದದಲ್ಲಿ ಅಸಹಜ ಮೈತ್ರಿಯನ್ನು ಒಡೆಯುವ ಕ್ರಮವನ್ನು ಗುರುತಿಸಿದರೆ, ಮಿತ್ರಸಂಪ್ರಾಪ್ತಿಯಲ್ಲಿ ಉತ್ತಮ ಮೈತ್ರಿಯನ್ನು ಸಾಫಲ್ಯಗೊಳಿಸುವ ಕ್ರಮವನ್ನುವಿವರಿಸಲಾಗಿದೆ. ಬುದ್ಧೇಮಹತ್ವಂ - ಬುದ್ಧಿಶಕ್ತಿಯ ಹಿರಿಮೆಯನ್ನು ಘೋಷಿಸುವ, ವಿದ್ಯೆಗಿಂತಲೂ ಬುದ್ಧಿಯೇ ಪ್ರಧಾನವೆಂದು ಸಾರುವಂತಹ ಅನೇಕ ಕಥೆಗಳನ್ನು ಪಂಚತಂತ್ರದಲ್ಲಿ ಕಾಣಬಹುದು. ಹೀಗೆ ತಂತ್ರಗಾರಿಕೆಯ ವ್ಯಾಪ್ತಿ ವಿಸ್ತೃತವಾಗುತ್ತಲೇ ಹೋಗುತ್ತದೆ. ಅಂತೆಯೇ ಸಾವಿರಾರು ವರ್ಷಗಳ ಹಿಂದೆಯೇ ರಚಿತವಾಗಿದ್ದರೂ, ಇಂದಿನ ಸಮಾಜಕ್ಕೂ, ಕಾಲಮಾನಕ್ಕೂ ಸಲ್ಲುವ ಅತ್ಯುತ್ತಮ ಕೃತಿ ಈ ಪಂಚತಂತ್ರವಾಗಿರುತ್ತದೆ.

---

7. **ವೆಂಕಣ್ಣಯ್ಯ ತಾ. ಶಾ**. ಗುಮಾನಿ ಕವಿಯ ಉಪದೇಶ ಶತಕಂ (1989), ಪು-14, ಶ್ರೀ ಶಾರದಾ ಟ್ರಸ್ಟ್, 4581, ಗೋಮತಿ, ಎನ್. ಆರ್. ಮೊಹಲ್ಲಾ, ಮೈಸೂರು - 7
8. **ಪಂಕಜನಯನ ಮತ್ತು ಕುಮುದವಲ್ಲಿ ಕೆ.ಆರ್.**, नारायणपण्डित विरचित हितोपदेशे विग्रहः ಸಂಸ್ಕೃತ ವಾಙ್ಮಯದಲ್ಲಿ ಕಥಾಸಾಹಿತ್ಯ ಪೀಠಿಕೆ ಪುಟ- 21, ಪ್ರಸಾರಾಂಗ, ಬೆಂ. ಕೇ. ವಿ.ವಿ., ಸೆಂ. ಕಾ. ಆ. ಬೆಂಗಳೂರು- 560 001 (2019-20)
9. **ರಾಮರಾವ್ ಎಸ್. ಸಂ.** विष्णुशर्म विरचित पञ्चतन्त्रे काकोलूकीयम् ಪುಟ - 26, 27, 28 ಪ್ರಸಾರಾಂಗ, ಬೆಂ.ಕೇ.ವಿ.ವಿ., ಸೆಂ.ಕಾ.ಆ. ಬೆಂಗಳೂರು- 560 001 (2019-20)

'ವ್ಯಕ್ತಿ ಮತ್ತು ಸಮಾಜದ ಹಿತ ಅಗತ್ಯಗಳಿಗೊಪ್ಪುವಂತೆ ಸೂಕ್ತ ಸನ್ನಿವೇಶ ರಚನೆಯಿಂದ ಮೂಲ ಸ್ವಭಾವವನ್ನು ಮಾರ್ಪಡಿಸುವುದೇ ಶಿಕ್ಷಣ' ಎಂದು ಪ್ರಸಿದ್ಧ ಮನೋವಿಜ್ಞಾನಿಗಳಾದ **WATSON**(1919)ರವರು ವ್ಯಾಖ್ಯಾನಿಸಿ ಶಿಕ್ಷಣಕ್ಕೊಂದು ನೂತನ ಅರ್ಥ ಕಲ್ಪಿಸಿದ್ದಾರೆ. ಹಾಗೆಯೇ ಮನೋವಿಜ್ಞಾನವನ್ನು 'ವರ್ತನೆಯ ಜ್ಞಾನ'ಎಂದು ತೋರಿಸಿಕೊಟ್ಟಿದ್ದಾರೆ. ಇದೇ ರೀತಿಯಲ್ಲಿ 'ಮಾನವನ ವರ್ತನೆ ಹಾಗೂ ಮಾನವನ ಅಂತರ ಸಂಬಂಧಗಳ ಅಧ್ಯಯನವೇ ಮನೋ-ವಿಜ್ಞಾನ' ಎಂದು **CROW & CROW** - ಎಂಬ ಮನಶ್ಶಾಸ್ತ್ರಜ್ಞರು ವಾಖ್ಯಾನಿಸಿದ್ದಾರೆ.[10] ಇದೇ ಮಾದರಿಯಲ್ಲಿ ವಿಷ್ಣುಶರ್ಮರು ಮಂದಮತಿಗಳಾದ ತ್ರಿಮೂರ್ತಿ ರಾಜಕುಮಾರರ ಮೂಲ ಸ್ವಭಾವವನ್ನು ಮಾರ್ಪಡಿಸಿ, ಒಳ್ಳೆಯ ಸನ್ನಿವೇಶಗಳನ್ನು ಸೃಷ್ಟಿಸಿ, ಅವರ ಸ್ವಭಾವ ಮತ್ತು ಭಾವನೆಗಳನ್ನು ಅರಿತು, ಸರ್ವತೋಮುಖ ಬೆಳವಣಿಗೆಗೆ, ನೀತಿಸಂಪನ್ನತೆಗನುವಾಗುವ ಆಕರ್ಷಕ ನೀತಿಕಥೆಗಳನ್ನು ಬೋಧಿಸುತ್ತಾ, ಬೌದ್ಧಿಕ ಪ್ರಗತಿಯತ್ತ ಮುನ್ನಡೆಸಿಕೊಂಡು, ಅವರ ವರ್ತನೆಗಳನ್ನು ಪರಿವರ್ತಿಸಿ ಉತ್ತಮ ಮಾರ್ಗದರ್ಶನ ನೀಡಿದ್ದಾರೆ.

ಶಿಕ್ಷಕ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಪ್ರತಿಯೊಬ್ಬ ಶಿಕ್ಷಕನಿಗೂ ಹಾಗೂ ವ್ಯಕ್ತಿ ವಿಕಸನ ಕ್ಷೇತ್ರದಲ್ಲಿನ ಮಾರ್ಗದರ್ಶಕರಿಗೂ ಪಂಚತಂತ್ರವು ಒಂದು ಸರ್ವಕಾಲಿಕ ಕೈಪಿಡಿಯಂತಿದೆ. ಪಂಚತಂತ್ರವನ್ನು ಸುಮಾರು 2000 ವರ್ಷಗಳ ಪೂರ್ವದಲ್ಲಿಯೇ ಬರೆಯಲಾಗಿದ್ದರೂ, ಅದರಲ್ಲಿರುವ ಮೌಲಿಕ ಜ್ಞಾನದಿಂದ ಅದು ಇಂದಿಗೂ ಲೋಕಪ್ರಿಯ.[11] ಪಂಚತಂತ್ರದಲ್ಲಿ ವಿಷ್ಣುಶರ್ಮರು ಕೇವಲ ಮಂದಮತಿಗಳಾದ ರಾಜಕುಮಾರರಿಗೆ ಮಾತ್ರ ಶಿಕ್ಷಣ ನೀಡಿರುವುದಲ್ಲ. ಅದರಲ್ಲಿ ಪ್ರತಿಯೊಬ್ಬರಿಗೂ ಸಂಸ್ಕೃತಿ, ಸಾಹಿತ್ಯ, ನೀತಿಶಾಸ್ತ್ರ ಸಂಗೀತ, ರಾಜನೀತಿ, ಅರ್ಥನೀತಿ, ಸಾಮಾನ್ಯಜ್ಞಾನ, ಜೀವನಶಿಕ್ಷಣ, ಬದುಕಿನ ವ್ಯವಹಾರಗಳ ಬಗ್ಗೆ ತಿಳುವಳಿಕೆ ಮುಂತಾದ ಅನೇಕ ವಿಚಾರಗಳನ್ನು, ಒದಗಿಸುತ್ತದೆ. ಒಂದು ರೀತಿಯಲ್ಲಿ ಸಮಗ್ರ ಅಂತಶ್ಶಾಸ್ತ್ರೀಯ ಶಿಕ್ಷಣ ಲಭ್ಯವಾಗುತ್ತದೆ. ಇನ್ನೂ ಹೆಮ್ಮೆಯಿಂದ ಹೇಳುವುದಾದರೆ, ಭಾರತದ ಘನ ಕೇಂದ್ರ ಸರ್ಕಾರ ಇದೀಗ ಘೋಷಿಸಿರುವ ಹೊಸ ಶಿಕ್ಷಣಪದ್ಧತಿ 2020ರಲ್ಲಿ ಪ್ರಾಚೀನ ಭಾರತೀಯ ಶಿಕ್ಷಣದ ಪುನರುಜ್ಜೀವನ **(Renaissance)** ಎಂಬಂತಿರುತ್ತದೆ. ಸಮಗ್ರ ಬಹು ವಿಷಯಗಳ ಶಿಕ್ಷಣ **(Holistic-Multidisciplinary-Education)** ಸಮಗ್ರ-ನಿರಂತರ-ಮೌಲ್ಯಮಾಪನ **(Continuous Comprehensive Evaluation)** ವಿವಿಧ ವೃತ್ತಿ ಕೌಶಲ್ಯ ವರ್ಧನೆಗೆ ತರಬೇತಿ **(Skill Enhancement Courses)** ಮಾನವಿಕ-ಶಿಕ್ಷಣ **(Humanistic Education)** ಭಾರತೀಯ ಸಾಂಸ್ಕೃತಿಕ ಪರಂಪರೆ ಮತ್ತು ಸಂಪ್ರದಾಯದ ಸಂರಕ್ಷಣೆ **(Preservation of Indian Cultural heritage and Tradition)** ಮುಂತಾದ ಪಠ್ಯಕ್ರಮಕ್ಕೆ ಒತ್ತುಕೊಟ್ಟಿರುವುದನ್ನು ಗಮನಿಸಿದರೆ, ವಿಷ್ಣುಶರ್ಮರು ಆ ಕಾಲದಲ್ಲಿಯೇ ಅದೆಷ್ಟು ಮೌಲ್ಯಾಧಾರಿತ ಹಾಗೂ ಸುಧಾರಿತ ಶಿಕ್ಷಣ ವ್ಯವಸ್ಥೆಯ ಗಂಭೀರ ಚಿಂತನೆ ನಡೆಸಿದ್ದರೆಂದು ಆಶ್ಚರ್ಯವಾಗುವುದು. ಪ್ರಾಚೀನ ಕಾಲದಿಂದಲೂ ಭಾರತೀಯ ಶಿಕ್ಷಣ ಪದ್ಧತಿ ಬಹಳ ಶಾಸ್ತ್ರೀಯವಾಗಿದ್ದು, ಭಾರತವು ವಿಶ್ವಗುರು ಎನಿಸಿಕೊಂಡಿದೆ.

ಪಂಚತಂತ್ರದಲ್ಲಿ ಮುಖ್ಯವಾಗಿ ಕಥೆಯೊಳಗೆ ಕಥೆಗಳಿವೆ. ಪ್ರತಿಯೊಂದು ಕಥೆಯಲ್ಲೂ ಬಹುಮೂಲ್ಯ ನೀತಿ ಅಡಗಿದ್ದು ಬೋಧಪ್ರದವಾಗಿದೆ, ಉಪದೇಶಾತ್ಮಕವಾಗಿದೆ. ಭಾಷೆ ಸರಳವಾಗಿದ್ದು, ಎಲ್ಲೂ ವಾಕ್ಯವಿನ್ಯಾಸ ಕಠಿಣವಿಲ್ಲ. ಕಥಾನಕಗಳನ್ನು ಗದ್ಯದಲ್ಲಿ ವರ್ಣನೆ ಮಾಡಿದ್ದರೆ, ಉಪದೇಶಾತ್ಮಕ ಸೂಕ್ತಿಗಳು ಪದ್ಯರೂಪದಲ್ಲಿವೆ. ಸುಲಲಿತ ಭಾಷೆಯಲ್ಲಿ ಉಪನಿಬದ್ಧವಾದ ಈ ಕೃತಿರತ್ನವು ನೀತಿಜಿಜ್ಞಾಸುಗಳಿಗೂ, ಪ್ರಥಮತಯಾ ಸಂಸ್ಕೃತ ಭಾಷಾಭ್ಯಾಸದಲ್ಲಿ ತೊಡಗಿಕೊಳ್ಳುವವರಿಗೂ ಒಂದು ವಿಶಿಷ್ಟವಾದ ಶಿಕ್ಷಣ ಕೈಪಿಡಿಯಾಗಿದೆ.[12]

ಮಾನವನ ಸುಖೀಜೀವನದ, ಬದುಕು ಬಾಳುಗಳ ಕೈದೀವಿಗೆಯಾಗಿ ಅರ್ಥಶಾಸ್ತ್ರವೆಂಬ ಒಂದು ಅತ್ಯುತ್ತಮ ಗ್ರಂಥವನ್ನು ಕೌಟಿಲ್ಯನು ರಚಿಸಿರುವುದು ಸರ್ವವೇದ್ಯವಾದ ವಿಷಯವಾಗಿದೆ. ಅದು ಒಂದೆಡೆ ರಾಜ್ಯಶಾಸ್ತ್ರವು, ಮತ್ತೊಂದೆಡೆ ಪ್ರತಿ ಮಾನವನೂ ತನ್ನ ಅಮೂಲ್ಯವಾದ ಜೀವನವನ್ನು ಉತ್ತಮಪಡಿಸಿಕೊಳ್ಳುವ ಬಗ್ಗೆ ಹೆಜ್ಜೆ ಹೆಜ್ಜೆಗೂ ನಮ್ಮನ್ನು ಎಚ್ಚರಗೊಳಿಸಿ, ಶಿಕ್ಷಣ ಕೊಟ್ಟು ಕಾಪಾಡುವ ಉತ್ತಮ ಸಂಗಾತಿಯೂ ಹೌದು. ಇದರ ಆಧಾರದಲ್ಲಿಯೇ ಪಂಚತಂತ್ರವೂ ಉದಯವಾಗಿದೆ.

---

10. **ವೀರಪ್ಪ ಎನ್. ಎಸ್**. ಶಿಕ್ಷಣದಲ್ಲಿ ಮನೋ ವಿಜ್ಞಾನ, 1962, ಪು-40, ಡಿ.ವಿಕೆ. ಮೂರ್ತಿ, ಕೆ.ಆರ್. ಪುರಂ, ಮೈಸೂರು - 4
11. http://www.hindujagruti.org ಪಂಚತಂತ್ರ ಬಾಲಸಂಸ್ಕಾರ, ಪಂಚತಂತ್ರದ ನಿರ್ಮಿತಿ
12. **ಕೃಷ್ಣಮೂರ್ತಿ ಕೆ. ರಂಗನಾಥ ಶರ್ಮ, ಸಿದ್ಧಗಂಗಯ್ಯ ಎಚ್. ಕೆ.** ಸಂಸ್ಕೃತ ಭಾಷಾ ಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ, ನೀ. ಕಾ. ಪು- 548(1976) ಕರ್ನಾಟಕ ಸರ್ಕಾರ ಪಠ್ಯಪುಸ್ತಕಗಳ ಇಲಾಖೆ ಬೆಂಗಳೂರು.

**JOHANNES HERTEL-(German Indologist)** ರವರು ಪಂಚತಂತ್ರ ಪಠ್ಯದ ಮೂಲವಸ್ತು ಅಧ್ಯಯನ ಹಾಗೂ ಸಂಪಾದನೆಯನ್ನು ಹಲವಾರು ವರ್ಷಗಳಿಂದ ನಡೆಸಿದ ಸಂದರ್ಭದಲ್ಲಿ ಅವರ **'Das Panchatantra'** (1914) ಮುನ್ನುಡಿಯಲ್ಲಿ ಹೀಗೆ ಬರೆದಿರುತ್ತಾರೆ. 'ಈ ಪುಸ್ತಕವು ಐತಿಹಾಸಿಕ ಸಾಧನೆಯನ್ನು ಸೂಚಿಸುತ್ತಾ ಸಮಸಾಟಿಯಿಲ್ಲದ ವಿಜಯೋತ್ಸವದ ಪ್ರಗತಿಯನ್ನು ಜನ್ಮಭೂಮಿಯಲ್ಲಿ ಸಾಧಿಸಿರುವುದಲ್ಲದೆ, ಜಗತ್ತಿನ ಸುಸಂಸ್ಕೃತ ಭಾಗಗಳಲ್ಲೆಲ್ಲಾ ಸುಮಾರು ಹದಿನೈದು ನೂರು ವರ್ಷಗಳಿಂದ ಯುವ ಮತ್ತು ಹಿರಿಯ, ವಿದ್ಯಾವಂತ ಮತ್ತು ಅಶಿಕ್ಷಿತ, ಶ್ರೀಮಂತ ಮತ್ತು ಬಡವ, ಮೇಲು-ಕೀಳೆನ್ನದೆ ಇಂದಿಗೂ ಇನ್ನೂ ಅವರೆಲ್ಲರನ್ನೂ ಸಂತೋಷಪಡಿಸುತ್ತಿದೆ. ಎಂಥಹ ದೊಡ್ಡ ಅಡೆತಡೆಗಳು- ಭಾಷೆ ಅಥವಾ ಪದ್ಧತಿಗಳು ಅಥವಾ ಧರ್ಮದ ಬಗ್ಗೆ ಇರುವಂತಹವು ಕೂಡ ಇದರ ವಿಜಯೋತ್ಸವ ಪ್ರಗತಿಯನ್ನು ತಡೆಯಲು ಸಮರ್ಥವಾಗುವುದಿಲ್ಲ.[13] ಈ ಕೃತಿಯ ಅಸಾಮಾನ್ಯ ಐತಿಹ್ಯ ನಿರೂಪಕ ಜನಪ್ರಿಯತೆಗೆ ಇದು ಯುಕ್ತವಾದ ಹಾಗೂ ನಿಖರವಾದ ಮೌಲ್ಯಮಾಪನವು.

ಪಂಚತಂತ್ರ ಕೃತಿಯನ್ನು ಸಮಗ್ರವಾಗಿ ಅಧ್ಯಯನ ಮಾಡಿದರೆ ಹತ್ತಾರು ಶೋಧ ಪ್ರಬಂಧಗಳಿಗೆ ವಿಷಯಗಳಾಗುವಷ್ಟು ಇದರ ವಿಶಾಲ ವ್ಯಾಪ್ತಿ ಇರುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ, ಬೋಧನಾ ವೃತ್ತಿಯಲ್ಲಿ ಪ್ರೌಢಶಾಲಾ ಹಂತದಿಂದ ಕಾಲೇಜು ಹಂತದವರೆಗೆ ಸುಮಾರು ನಲವತ್ತು ವರ್ಷಗಳಿಗೂ ಮೇಲ್ಪಟ್ಟು ಬಾಷಾ- ಮತ್ತು ಇತಿಹಾಸ ಪಾಠಗಳ ಬೋಧನೆ ಮಾಡಿರುವುದರಿಂದ ನನ್ನ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಂಡು, ಪ್ರಸ್ತುತ ವಿಷಯ- 'ಪಂಚತಂತ್ರದಲ್ಲಿ ಶೈಕ್ಷಣಿಕ-ಮನೋವಿಜ್ಞಾನ ಮತ್ತು ವ್ಯಕ್ತಿತ್ವ ನಿರ್ಮಾಣ ಕಲೆ' ಒಂದು ವಿಮರ್ಶಾತ್ಮಕ ಅಧ್ಯಯನ?ಎಂಬುದರ ಬಗ್ಗೆ ವಿಶೇಷ ಅಧ್ಯಯನ ನಡೆಸಿ ಈ ಮಹಾಪ್ರಬಂಧವನ್ನು ರಚಿಸುವ ಪ್ರಯತ್ನಕ್ಕೆ ಪ್ರೇರಣೆ ಮತ್ತು ಕಾರಣವಾಗಿರುತ್ತದೆ. ಈ ಮಹಾಪ್ರಬಂಧವನ್ನು ಒಟ್ಟು ಮೂರು ವಿಭಾಗಗಳಾಗಿ ವಿಂಗಡಣೆ ಮಾಡಿಕೊಳ್ಳಲಾಗಿದೆ. ಅವುಗಳೆಂದರೆ:

ಅ)-ಪ್ರಾಸ್ತಾವಿಕ-ವಿಭಾಗ.ಬ)-ಅಧ್ಯಾಯ-ವಿಭಾಗ.ಕ)-ಉಪಸಂಹಾರ-ವಿಭಾಗ

### ಅ - ಪ್ರಾಸ್ತಾವಿಕ ವಿಭಾಗ

ಈ ವಿಭಾಗದಲ್ಲಿ 1. ಪ್ರಸ್ತಾವನೆ,ವಿಷಯಾಸಕ್ತಿ, ವಿಷಯದವ್ಯಾಪ್ತಿ, ಉದ್ದೇಶ,ಪ್ರಯೋಜನ,

2. ಪೀಠಿಕೆ-ವಿಶ್ವಸಾಹಿತ್ಯದಲ್ಲಿ ಸಂಸ್ಕೃತ ಸಾಹಿತ್ಯದ ಸ್ಥಾನಮಾನ ಅಧ್ಯಯನದ ಉದ್ದೇಶ- ವ್ಯಾಪ್ತಿ-ಮಿತಿಗಳು ಮತ್ತು ವಿಷಯ ಪ್ರವೇಶ-ಇತ್ಯಾದಿಗಳ ವಿವೇಚನೆ ಮಾಡಲಾಗಿದೆ.

### ಬ - ಅಧ್ಯಾಯ - ವಿಭಾಗ

ಅಧ್ಯಾಯಗಳ ವಿಭಾಗದಲ್ಲಿ ಒಟ್ಟು ಎಂಟು ಅಧ್ಯಾಯಗಳಲ್ಲಿ ಪಂಚತಂತ್ರ ನೀತಿಕಥಾಗುಚ್ಛದ ಕಥೆಗಳನ್ನು ಶೈಕ್ಷಣಿಕ ಮನೋವಿಜ್ಞಾನದ ಪರಿಕಲ್ಪನೆಗಳೊಂದಿಗೆ ವಿಶ್ಲೇಷಣೆ ಮಾಡಲಾಗಿದೆ. ಪಂಚತಂತ್ರದ ಆಂತರಿಕ ವಿಷಯಗಳನ್ನು ಪರಿಚಯಿಸುತ್ತಾ, ಪರಿಶೀಲಿಸುತ್ತಾ, ವಿಷಯದ ಸೂಕ್ಷ್ಮತೆ ಹಾಗೂ ಇತಿಮಿತಿಗಳನ್ನರಿತು ವಿಚಾರಗಳನ್ನು ಮಂಡಿಸಲಾಗಿದೆ.

**ಅಧ್ಯಾಯ-1. ಸಂಸ್ಕೃತ ಕಥಾಸಾಹಿತ್ಯ:-**

1ನೇ-ಅಧ್ಯಾಯದಲ್ಲಿ,ಅನುಕ್ರಮವಾಗಿ ಸಂಸ್ಕೃತ ಕಥಾಸಾಹಿತ್ಯ-ಇದರ ಪ್ರಾಚೀನತೆ-ಮಹತ್ವ, ಸಂಸ್ಕೃತ ಸಾಹಿತ್ಯದಲ್ಲಿ ನೀತಿಕಥೆಗಳು-ಪಂಚತಂತ್ರ-ನೀತಿಕಥೆಗಳು, ಇದರ ಕಾಲ-ಕರ್ತೃ-ದೇಶ ಇತ್ಯಾದಿಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಸಂಸ್ಕೃತ ಸಾಹಿತ್ಯ ಅಧ್ಯಯನದ ಪುಷ್ಟೀಕರಣ-ವಿಶ್ವಸಾಹಿತ್ಯಗಳಲ್ಲೆಲ್ಲಾ ಸಂಸ್ಕೃತ ಸಾಹಿತ್ಯದ ವಿಶೇಷ ಸ್ಥಾನಮಾನ, ರಚನಾಕೌಶಲ್ಯ-ಪಂಚತಂತ್ರದ ನೀತಿಬೋಧೆಯ ಮೂಲಕ ಬದುಕಿನ ಶಿಕ್ಷಣ ನೀಡುವ ಕೌಶಲ್ಯ-ಇದರ ಜ್ಞಾನಾತ್ಮಕ, ಉಪದೇಶಾತ್ಮಕ, ಶಿಕ್ಷಣಾತ್ಮಕ ಮತ್ತು ಪ್ರತಿಪಾದಕ ಲಕ್ಷಣಗಳು.

---

೩. **Rajan Chandra,** translated from Sanskrit with an introduction Visnusarma, intrpp-15(1993), Penguin random house pvt. Ltd. 7th floor, Infinity tower C, DLS, Cyber city, Gurgoan - 122 002, Haryana, INDIA.

**ಅಧ್ಯಾಯ-2. ಶಿಕ್ಷಣದಲ್ಲಿ ಮನೋವಿಜ್ಞಾನದ ಪಾತ್ರ:-**

ಈ ಅಧ್ಯಾಯದಲ್ಲಿ ಅನುಕ್ರಮವಾಗಿ ಮೊದಲು ಮನೋವಿಜ್ಞಾನದ ಪೀಠಿಕೆ-ಅರ್ಥ ಮತ್ತು ವ್ಯಾಪ್ತಿ; ನಂತರದಲ್ಲಿ ಅನ್ವಯಿಕ-ವಿಜ್ಞಾನ, ಶೈಕ್ಷಣಿಕ-ಮನೋವಿಜ್ಞಾನ-ಇದರ ಅರ್ಥ-ವ್ಯಾಖ್ಯೆಗಳು-ವ್ಯಾಪ್ತಿ ಬಗ್ಗೆ ವಿಶ್ಲೇಷಿಸಲಾಗಿದೆ. ನಂತರ ಶಿಕ್ಷಣದಲ್ಲಿ ಮನೋವಿಜ್ಞಾನದ ಮಹತ್ವ ಕುರಿತು ವಿಚಾರ ಮಾಡಲಾಗಿದೆ. ಅಂತ್ಯ ಭಾಗದಲ್ಲಿ ಪಂಚತಂತ್ರ ನೀತಿಕಥೆಗಳಲ್ಲಿ ಕಂಡುಬರುವ ಶೈಕ್ಷಣಿಕ ಮನೋವಿಜ್ಞಾನದ ಕೆಲವು ಅಂಶಗಳ ಬಗ್ಗೆ ವಿಶ್ಲೇಷಿಸಲಾಗಿದೆ.

**ಅಧ್ಯಾಯ-3. ವ್ಯಕ್ತಿತ್ವದ ಬೆಳವಣಿಗೆ ಮತ್ತು ವಿಕಾಸ:-**

ಈ ಅಧ್ಯಾಯದಲ್ಲಿ ಅನುಕ್ರಮವಾಗಿ ವ್ಯಕ್ತಿ ಬೆಳವಣಿಗೆಯಲ್ಲಿ **ಮೂಲ ಸ್ವಭಾವ-ವೈಯಕ್ತಿಕ ಭಿನ್ನತೆಗಳು (Individual differences)** ಈ ಬಗ್ಗೆ ಚರ್ಚಿಸಲಾಗಿದೆ. ಮನುಷ್ಯನ ಸರ್ವತೋಮುಖ ವಿಕಾಸವೇ ಶಿಕ್ಷಣದ ಪರಮ ಗುರಿ- ಹಾಗೆಂದರೆ ವ್ಯಕ್ತಿಯ **ಶಾರೀರಿಕ, ಮಾನಸಿಕ, ಬೌದ್ಧಿಕ, ಸಾಮಾಜಿಕ, ನೈತಿಕ ಮತ್ತು ಆಧ್ಯಾತ್ಮಿಕ ವಿಕಾಸ**ವೇ ಶಿಕ್ಷಣದ ಗುರಿ. ಬೆಳವಣಿಗೆ ಮತ್ತು ವಿಕಾಸ ಕಾರ್ಯದಲ್ಲಿ ಅನುವಂಶೀಯತೆ ಮತ್ತು ಪರಿಸರದ ಪ್ರಭಾವ ಕುರಿತು ವಿಶ್ಲೇಷಣೆ. ನಂತರದಲ್ಲಿ ಕಲಿಕೆ ಅದರ ಅರ್ಥ-ಸ್ವರೂಪ-ವ್ಯಾಖ್ಯೆ ಮನೋವಿಜ್ಞಾನದಲ್ಲಿ ಕಲಿವೇ ಪ್ರಧಾನ, ವ್ಯಕ್ತಿಯ ವರ್ತನೆಯಲ್ಲಿ ಬದಲಾವಣೆ ತರುವುದೇ ಕಲಿಕೆ. ಕಲಿಕೆಯಮೇಲೆ ಪ್ರಭಾವ ಬೀರುವ ಅಂಶಗಳು-**ಅಭಿಪ್ರೇರಣೆ-(Motivation) ಅವಧಾನ(Attention)**-ಇವುಗಳ ಮನೋವೈಜ್ಞಾನಿಕ ಪ್ರಾಮುಖ್ಯತೆ ಸ್ಪಷ್ಟಪಡಿಸಿದೆ. ಮುಂದೆ **ಸ್ಮೃತಿ(Memory) ವಿಸ್ಮೃತಿ (Forgetting) ಕಲಿಕೆಯ ವರ್ಗಾವಣೆ (Transfer of Learning)** ಇವುಗಳ ಬಗ್ಗೆ ಪರಿಶೀಲಿಸಿದೆ. ಅಧ್ಯಾಯದ ಅಂತ್ಯದಲ್ಲಿ प्रथम तन्त्र मित्रभेदः ಕಥೆಗಳ ವಿಶ್ಲೇಷಣೆ ಮಾಡುತ್ತಾ, ವಿಷ್ಣುಶರ್ಮರು ಹೇಗೆ ಶೈಕ್ಷಣಿಕ ಕ್ರಮಗಳನ್ನು ಅನುಸರಿಸಿ ಮಂದಮತಿಗಳಾದ ಅರಸುಕುಮಾರರಲ್ಲಿ ಅಭಿಪ್ರೇರಣೆ ಅವಧಾನವನ್ನು ಹಿಡಿದಿಟ್ಟು, ನೈಸರ್ಗಿಕ ಜಗತ್ತನ್ನು ಮಾನವ ಜಗತ್ತಿಗೆ ಸ್ಥಳಾಂತರಿಸುವ ಒಂದು ಚಮತ್ಕಾರವನ್ನುಪಯೋಗಿಸಿ ವಿಶೇಷ ಆಕರ್ಷಣೆ ಹಾಗೂ ಆಸಕ್ತಿಯನ್ನು ಮೂಡಿಸಿ, ಕಲಿಕೆಯನ್ನು ಪರಿಣಾಮಕಾರಿಗೊಳಿಸಿರುವುದನ್ನು ಗುರುತಿಸಲಾಗಿದೆ.

**ಅಧ್ಯಾಯ-4. ಮನಶ್ಶಕ್ತಿಯ ವ್ಯಾಪಕ ಸ್ವರೂಪ, ಕಲಿಕೆ ಮತ್ತು ವ್ಯಕ್ತಿತ್ವದ ಮೇಲೆ ಅದರ ಪ್ರಭಾವ.**

ಈ ಅಧ್ಯಾಯದಲ್ಲಿ ಅನುಕ್ರಮವಾಗಿ ಉನ್ನತ ಮಟ್ಟದ ಮನೋವ್ಯಾಪಾರಗಳ ಪರಿಚಯ; ಮಾನವಶಕ್ತಿಯ ಮಹೋನ್ನತಿಗೆ ಮೂಲ ಕಾರಣ ಮನಸ್ಸು; ಮನಸ್ಸಿನಲ್ಲಿ ಉಂಟಾಗುವ **ಕಲ್ಪನೆ, ನೆನಪು, ಆಲೋಚನೆ ಮತ್ತು ಉನ್ನತ ಮನಶ್ಶಕ್ತಿ** ಹಾಗೂ ಇನ್ನಿತರ ಮನೋವ್ಯಾಪಾರಗಳಾದ **ದೃಷ್ಟಿ-ಧ್ಯೇಯಗಳು, ಅರ್ಜಿತ ಆಸಕ್ತಿಗಳು, ಮನೋಭಾವನೆಗಳು, ಸಂವೇದನೆಯ ಸ್ವರೂಪ**-ಇವೆಲ್ಲವೂ ಉನ್ನತ ಮನಶ್ಶಕ್ತಿಯಿಂದ ಪ್ರಚೋದಿತವಾಗುತ್ತವೆ. ನಂತರದಲ್ಲಿ **ಆಲೋಚನೆ(Thought)** ಅದರ ಅರ್ಥ-ವಿಧಗಳು-ವಿವೇಚನೆ-ವಿವೇಚನೆಯ ಪಂಚಸೋಪಾನಗಳು ಮುಂತಾದ ವಿಚಾರಗಳ ಬಗ್ಗೆ ವಿವೇಚಿಸಲಾಗಿದೆ. ಮುಂದೆ **ಮನೋಧೋರಣೆಗಳು (Attitudes)- ವರ್ತನೆಗಳು -ಪರಿವರ್ತನೆ (Transformation)** ಹಾಗೂ **ಶೀಲಸಂಪನ್ನತೆ (Character building)** ಇವುಗಳ ಪರಿಕಲ್ಪನೆಯನ್ನು ಮತ್ತು ವ್ಯಕ್ತಿತ್ವ ನಿರ್ಮಾಣದಲ್ಲಿ ಅವುಗಳ ಪ್ರಾಮುಖ್ಯತೆ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ. ಅಂತ್ಯದಲ್ಲಿ प्रथम तन्त्र मित्रभेदः ಕಥೆಗಳ ಮುಂದುವರಿದ ಭಾಗದ ವಿಶ್ಲೇಷಣೆ ಮಾಡುತ್ತಾ, ವಿಷ್ಣುಶರ್ಮರು ಈ ತಂತ್ರದಲ್ಲಿ ಹೇಗೆ ಸ್ವಾರಸ್ಯಕರ ನೀತಿಕಥೆಗಳ ನಿರೂಪಣೆಯಿಂದ ರಾಜಕುಮಾರರ ಆಸಕ್ತಿಯನ್ನು ಪ್ರೇರೇಪಿಸಿ, ಅವರೇ ಇನ್ನೊಂದು-ಮತ್ತೊಂದು ಕಥೆಯನ್ನು ಕೇಳುವಂತೆ ಹುರಿದುಂಬಿಸಿ, ಒಳ್ಳೆಯ ಶಿಕ್ಷಣ ನೀಡಿದ್ದಾರೆ ಎಂಬುದನ್ನು ಗುರುತಿಸಲಾಗಿದೆ.

**ಅಧ್ಯಾಯ- 5. ಜ್ಞಾನಾತ್ಮಕ ಬೆಳವಣಿಗೆ ಮತ್ತು ಸಂವೇಗಾತ್ಮಕ ಬುದ್ಧಿಶಕ್ತಿ ವಿಕಾಸ**

ಈ ಅಧ್ಯಾಯದಲ್ಲಿ ಐದು ಉಪ-ವಿಭಾಗಗಳಲ್ಲಿರುತ್ತದೆ. ಅನುಕ್ರಮವಾಗಿ **ಸೃಜನಶೀಲತೆ(Creativity)**- ಇದರ ಅರ್ಥ-ಸ್ವರೂಪ-ವ್ಯಾಖ್ಯಾನ-ಸೃಜನಶೀಲತೆಯ ವಿಕಾಸದ ಹಂತಗಳು ಮುಂತಾದವನ್ನು ವ್ಯಕ್ತಿ-ವಿಕಾಸದ ಹಿನ್ನೆಲೆಯಲ್ಲಿ

ವಿಶ್ಲೇಷಿಸಲಾಗಿದೆ. ನಂತರದಲ್ಲಿ **ವ್ಯಕ್ತಿತ್ವ ಮತ್ತು ವ್ಯಕ್ತಿತ್ವ ವಿಕಾಸ**ದ ಅರ್ಥ-ವ್ಯಾಖ್ಯಾನಗಳು; ವ್ಯಕ್ತಿತ್ವ ನಿರ್ಧರಿಸುವ ಅಂಶಗಳು; ಬಹು ಮುಖ್ಯವಾಗಿ ಅನುವಂಶೀಯತೆ ಮತ್ತು ಪರಿಸರದ ಪಾತ್ರ; ವ್ಯಕ್ತಿತ್ವ ರೂಪಿಸುವಲ್ಲಿ ಶಾಲೆ ಮತ್ತು ಶಿಕ್ಷಕರ-ಪಾತ್ರ- ಇತ್ಯಾದಿ ಶೈಕ್ಷಣಿಕ ಮನೋವಿಜ್ಞಾನದ ವಿಚಾರಗಳನ್ನು ಚರ್ಚಿಸಲಾಗಿದೆ. ನಂತರದಲ್ಲಿ ಉತ್ತಮ ಅಭ್ಯಾಸಗಳ ಬೆಳವಣಿಗೆ ಮತ್ತು ನಾಯಕತ್ವದ ಬಗ್ಗೆ ವಿವೇಚಿಸಲಾಗಿದೆ ಅಂತ್ಯ ಭಾಗದಲ್ಲಿ द्वितीय तन्त्रं मित्रसंप्राप्तिः ಕಂಡುಬರುವ ಕಥೆಗಳನ್ನು ಪರಿಶೀಲಿಸಿ ಮೇಲಿನ ಅಂಶಗಳು ಎಷ್ಟರಮಟ್ಟಿಗೆ ಈ ಕಥೆಗಳಲ್ಲಿ ಅಡಕಗೊಂಡಿದೆ ಎಂಬುದನ್ನು ಗುರುತಿಸಲಾಗಿದೆ.

**ಅಧ್ಯಾಯ-6.ಅರಿವೇ ಗುರು- ಮನಶ್ಶಕ್ತಿ**

ಈ ಅಧ್ಯಾಯದಲ್ಲಿ ಅನುಕ್ರಮವಾಗಿ ಮೊದಲು ಅರಿವಿನ ಅರ್ಥ ಮತ್ತು ವ್ಯಾಪ್ತಿಯ ಸ್ಪಷ್ಟ ವಿವರಣೆ ಇರುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಅರಿವಿನ ಮಹತ್ವ, ವ್ಯಕ್ತಿ-ನಿರ್ಮಾಣ ಕಾರ್ಯದಲ್ಲಿ ಅರಿವಿನ ಪ್ರಾಮುಖ್ಯತೆ, ಮಾನವನ ಮಹೋನ್ನತಿ ಮನಶ್ಶಕ್ತಿಯಲ್ಲಿ: ಮಾನವನು ತನ ಪೂರ್ವಾಶ್ರಮದ ಮಂಗಪೂರ್ವಜರ ಸುಳಿಯಿಂದ ವಿಕಸನ ಹೊಂದಿ ಮಹೋನ್ನತ ಪ್ರಾಣಿಯಾಗಿರುವುದು ಅವನ ಮನಶ್ಶಕ್ತಿಯಿಂದ- ಬೆಳವಣಿಗೆಯಿಂದ. ಈ ಮನೋವ್ಯಾಪಾರವೇ **ರಚನಾತ್ಮಕ ಬಿಂಬಕಲೆ**. ಮುಂದೆ **ಜೀವನ ಮೌಲ್ಯಗಳನ್ನು ಬೆಳೆಸುವಿಕೆ**: ಚಿಂತನ-ಮಂಥನ ಮಾನವನಿಗೆ ಒಂದು ಅಗತ್ಯ ಗುಣ; ಒಂದು ವ್ಯವಸ್ಥಿತ ಸ್ವರೂಪದಲ್ಲಿ ಹಲವಾರು ಮೌಲ್ಯಗಳನ್ನು ಹಾಗೂ ಆದರ್ಶಗಳನ್ನು ರೂಡಿಸಿಕೊಂಡು ಜೀವನ ನಡೆಸಬೇಕು-ಈ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ. ಅಧ್ಯಾಯದ ಅಂತ್ಯ ಭಾಗದಲ್ಲಿ तृतीय तन्त्रं काकोलूकीयम् ನಲ್ಲಿ ಹೆಣೆದಿರುವ ಕಥೆಗಳನ್ನು ವಿಶ್ಲೇಷಣೆ ಮಾಡುತ್ತಾ, ವಿಷ್ಣುಶರ್ಮರು ಅರಸುಕುಮಾರರಿಗೆ ಶಿಕ್ಷಣನೀಡುವಲ್ಲಿ ಹೇಗೆ ಸುವ್ಯವಸ್ಥಿತ ಸನ್ನಿವೇಶಗಳನ್ನೂ, ದೃಷ್ಟಾಂತಗಳನ್ನೂ ಮನೋವೈಜ್ಞಾನಿಕವಾಗಿ ಹಾಗೂ ಅರ್ಥಪೂರ್ಣವಾಗಿ ಪಂಚತಂತ್ರ ಕಥೆಗಳ ಮೂಲಕ ಒದಗಿಸಿಕೊಟ್ಟು, ಬದುಕಿನ ಮಂತ್ರಗಳನ್ನು, ನೀತಿ-ಶಿಕ್ಷಣದಲ್ಲಿ ಬೋಧಿಸಿದ್ದಾರೆಂಬುದನ್ನು ಗುರುತಿಸಲಾಗಿದೆ.

**ಅಧ್ಯಾಯ-7. ಜೀವನ ಶಿಕ್ಷಣ**

ಈ ಅಧ್ಯಾಯದಲ್ಲಿ ಆರಂಭಿಕವಾಗಿ ಉತ್ತಮ ಬದುಕಿಗೆ ಬೇಕಾದ ನೀತಿಬೋಧೆಗಳ ಪರಿಚಯ ಮಾಡಿಕೊಡಲಾಗಿದೆ. ಕಲಿತದ್ದು ಮನಸ್ಸಿನಲ್ಲಿ ಸಂಗ್ರಹವಾಗಿಬಿಟ್ಟರೆ ಶಿಕ್ಷಣದ ಗುರಿ ಈಡೇರುವುದಿಲ್ಲ. ಅದು ಜೀವನದ ಮೇಲೆ ಪ್ರಭಾವ ಬೀರಬೇಕು. ಕಲಿವು ಕಾರ್ಯಪ್ರದವೂ, ಜೀವನಕ್ಕೆ ಅನ್ವಯಿಸುವಂಥಹುದೂ ಆದ ಸನ್ನಿವೇಶದಲ್ಲಿ ಸಾಗಬೇಕು. **'ಶಿಕ್ಷಣವೇ ಜೀವನ, ಜೀವನವೇ ಶಿಕ್ಷಣ'** ಎಂದು ತಜ್ಞರು ವ್ಯಾಖ್ಯಾನಿಸಿರುವುದನ್ನು ವಿವರವಾಗಿ ವಿಶ್ಲೇಷಿಸಿದೆ. ಆನಂತರದಲ್ಲಿ **ವಿದ್ಯೆ-ಬುದ್ಧಿ-ಸಾಮಾನ್ಯಜ್ಞಾನ** ಇವುಗಳ ವಿಚಾರವಾಗಿ ಅರ್ಥ-ವ್ಯತ್ಯಾಸ- ಮತ್ತು ಮಹತ್ವವನ್ನು ಕುರಿತು ವಿವೇಚಿಸಲಾಗಿದೆ. ಶೃತಿಸ್ಮೃತಿಪುರಾಣೇತಿಹಾಸಗಳಲ್ಲಿ ಬುದ್ಧಿಶಕ್ತಿಯ ಬಗ್ಗೆ ಏನು ವಿಚಾರಗಳಿವೆ? ಮನೋವಿಜ್ಞಾನಿಗಳು ಬುದ್ಧಿಶಕ್ತಿಯ ಬಗ್ಗೆ ಏನು ಪ್ರತಿಪಾದಿಸಿದ್ದಾರೆಂಬ ಬಗ್ಗೆ ಪರಿಶೀಲಿಸಲಾಗಿದೆ. ಇನ್ನು ಸಾಮಾನ್ಯ ಜ್ಞಾನ ಎಷ್ಟು ಮುಖ್ಯ? ಶಾಸ್ತ್ರ ವ್ಯವಹಾರಗಳಲ್ಲಿ ಕುಶಲರಾಗಿದ್ದರೂ ಲೋಕ ವ್ಯವಹಾರ ತಿಳಿಯದ ಮೂರ್ಖ ಪಂಡಿತರು ಹೇಗೆ ಅಪಹಾಸ್ಯಕ್ಕೆ ಗುರಿಯಾಗುತ್ತಾರೆ? ಇಂಥಹ ವಿಚಾರಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಅಂತ್ಯದಲ್ಲಿ चतुर्थ तन्त्रं लब्धप्रणाशम् ನಲ್ಲಿ ಅಡಕಗೊಂಡಿರುವಕಥೆಗಳ ವಿಶ್ಲೇಷಣೆಯೊಂದಿಗೆ ಶೈಕ್ಷಣಿಕಮನೋವಿಜ್ಞಾನದ ಪರಿಕಲ್ಪನೆಗಳು ಎಷ್ಟರಮಟ್ಟಿಗೆ ಅನ್ವಯವಾಗಿದೆ ಎಂಬುದನ್ನು ಗುರುತಿಸಲಾಗಿದೆ.

**ಅಧ್ಯಾಯ-8.ಮಾರ್ಗದರ್ಶನ ಮತ್ತು ಸಲಹೆ**

ಈ ಅಧ್ಯಾಯದಲ್ಲಿ ಮಾರ್ಗದರ್ಶನದ ಮತ್ತು ಸಲಹೆಯ ಅರ್ಥ-ವ್ಯಾಖ್ಯೆ-ವಿಧಗಳು ಮುಂತಾದ ವಿಚಾರಗಳನ್ನು ವಿವೇಚಿಸಲಾಗಿದೆ. ಹಾಗೆಯೇ, ಸಾಮಾನ್ಯ ಜ್ಞಾನದ ಕೊರತೆಯಿಂದ ಉಂಟಾಗುವ ಪರಿಣಾಮಗಳು- ಕೊನೆಯ ತಂತ್ರದ ಹೆಸರೇ ಹೇಳುವಂತೆ ಪರೀಕ್ಷಿಸದೆ ಕೆಲಸ ಮಾಡುವುದು ಮತ್ತು ಅದರ ಪರಿಣಾಮ ಇವುಗಳ ಬಗ್ಗೆ ವಿಚಾರ ಮಾಡಲಾಗಿದೆ.

ಅಂತ್ಯದಲ್ಲಿ पञ्चम तन्त्रं अपरीक्षितकारकम् ನಲ್ಲಿ ಹೆಣೆದಿರುವ ಕಥೆಗಳನ್ನು ವಿಶ್ಲೇಷಣೆಮಾಡಿ, ಅದರಲ್ಲಿ ಕಂಡುಬರುವ ಶೈಕ್ಷಣಿಕ ಹಾಗೂ ಮನೋವೈಜ್ಞಾನಿಕ ಅಂಶಗಳನ್ನು ಗುರುತಿಸಲಾಗಿದೆ.

**ಕ)–ಉಪಸಂಹಾರ ವಿಭಾಗ**

ಈ ವಿಭಾಗದಲ್ಲಿ ಸಮಗ್ರ ಮಹಾಪ್ರಬಂಧವನ್ನು ಪರಿಶೀಲಿಸಿದ ನಂತರದಲ್ಲಿ ಗ್ರಂಥದ ನಿಲುವನ್ನು ಸ್ಪಷ್ಟೀಕರಣಗೊಳಿಸಿ ವಿಷಯಗಳನ್ನು ಉಪಸಂಹರಿಸಿದೆ.

## ಉಪಸಂಹಾರ

ಪಂಚತಂತ್ರವು ಮೂರ್ಖನನ್ನೂ ವ್ಯವಹಾರ ಕುಶಲನನ್ನಾಗಿ ಮಾಡುವ ಸಂಸ್ಕೃತ ಭಾಷೆಯ ಕೊಡುಗೆ. ವಿಶಿಷ್ಟವಾದ ಐದು ತಂತ್ರಗಳು ರಾಜನೀತಿಶಿಕ್ಷಣ ಮತ್ತು ಸಾಮಾನ್ಯ ವ್ಯಕ್ತಿಯ ಜೀವನ ಶಿಕ್ಷಣದ ಮಾರ್ಗದರ್ಶಕ ತತ್ವಗಳಾಗಿವೆ. ಮಾನವನ ವರ್ತನೆ ಹಾಗೂ ಮಾನವನ ಅಂತರ ಸಂಬಂಧಗಳ ಅಧ್ಯಯನವೇ ಮನೋವಿಜ್ಞಾನ ಎಂದು **CROW & CROW** ವ್ಯಾಖ್ಯಾನಿಸುತ್ತಾರೆ.[14] ಇದೇ ಮಾದರಿಯಲ್ಲಿ ವಿಷ್ಣುಶರ್ಮರು ಮೂವರು ಮಂದಮತಿಗಳಾದ ರಾಜಕುಮಾರರಿಗೆ ಒಳ್ಳೆಯ ಕಲಿಕಾ ಸನ್ನಿವೇಶ ಸೃಷ್ಟಿಸಿ, ಅವರ ಸ್ವಭಾವ ಮತ್ತು ಭಾವನೆಗಳನ್ನು ಗಮನಿಸಿ, ಅವರ ವರ್ತನೆಯನ್ನು ಪರಿವರ್ತಿಸಿ, ಸರ್ವತೋಮುಖ ಬೆಳವಣಿಗೆಗೆ ಆಕರ್ಷಕ ನೀತಿಕಥೆಗಳನ್ನು ಬೋಧಿಸುತ್ತಾ ಬೌದ್ಧಿಕ ಪ್ರಗತಿಯತ್ತ ಮುನ್ನಡೆಸಿಕೊಂಡು ರಾಜನೀತಿ ನಿಪುಣರೂ ಹಾಗೂ ಬದುಕಿನ ವ್ಯವಹಾರಗಳ ಚತುರರೂ ಆಗುವಂತೆ ಉತ್ತಮ ಶಿಕ್ಷಣ ನೀಡಿದ್ದಾರೆ. ವಿಷ್ಣುಶರ್ಮರಿಗೆ ಅಂದೇ ಒಳ್ಳೆಯ ಶೈಕ್ಷಣಿಕಮನೋವಿಜ್ಞಾನದ ಪರಿಕಲ್ಪನೆಗಳು ದೈವದತ್ತವಾಗಿಯೇ ಲಭ್ಯವಾಗಿತ್ತೆಂದು ತಿಳಿಯಬಹುದು. ಈ ಸಾಧನೆ ನಿಜಕ್ಕೂ ಇಂದಿನ ಶಿಕ್ಷಕ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಪ್ರತಿಯೊಬ್ಬ ಶಿಕ್ಷಕನಿಗೂ ಹಾಗೂ ವ್ಯಕ್ತಿತ್ವ ವಿಕಸನ ಕ್ಷೇತ್ರದಲ್ಲಿ ಪರಿಶ್ರಮಿಸುವ ಅನೇಕರಿಗೆ ಮಾದರಿಯೂ, ಮಾರ್ಗದರ್ಶಕವೂ ಆಗಿದೆಯೆಂದು ಹೇಳಬಹುದು. ಪಂಚತಂತ್ರದ ಪ್ರಯೋಜನ ಎಷ್ಟಿದೆಯೆಂದರೆ ಸಾಮಾನ್ಯ ಜನರೂ ಒಂದು ಉತ್ತಮವಾದ ಬದುಕಿನ ವ್ಯವಹಾರಗಳ ನೀತಿಶಿಕ್ಷಣವನ್ನು, ಮನೋರಂಜಕವಾಗಿ, ಮನೋಜ್ಞವಾಗಿ ತಿಳಿದುಕೊಳ್ಳಲು ಅವಕಾಶವಿದೆ. ಅದೇ ರೀತಿಯಲ್ಲಿ ಪೋಷಕರು ಕೂಡಾ ತಮ್ಮ ಮಕ್ಕಳಲ್ಲಿ ಇದರ ಮೂಲಕ ಸರಳವಾಗಿ ಆಕರ್ಷಕವಾಗಿ ಹಾಗೂ ಪ್ರೀತಿಯಿಂದ ಒಳ್ಳೆಯ ವ್ಯಕ್ತಿತ್ವ ನಿರ್ಮಾಣ ಮಾಡಬಹುದು. ಸುಲಲಿತ ಭಾಷೆಯಲ್ಲಿ ಉಪನಿಬದ್ಧವಾದ ಈ ಕೃತಿರತ್ನವು ನೀತಿ ಜಿಜ್ಞಾಸುಗಳಿಗೂ, ಪ್ರಥಮತಯಾ ಸಂಸ್ಕೃತ ಭಾಷಾಭ್ಯಾಸದಲ್ಲಿ ತೊಡಗಿಸಿಕೊಳ್ಳುವವರಿಗೂ ಒಂದು ವರದಾನವಾಗಿದೆ. ಧರ್ಮಶಾಸ್ತ್ರ, ಅರ್ಥಶಾಸ್ತ್ರ, ಕಾಮಶಾಸ್ತ್ರ, ಆಯುರ್ವೇದ ಗ್ರಂಥಗಳಿಂದ, ಪುರಾಣ ಮಹಾಕಾವ್ಯಗಳಿಂದ, ರಾಮಾಯಣ, ಮಹಾಭಾರತ ಮುಂತಾದ ನೀತಿಕಾವ್ಯಗಳಿಂದ ಉದ್ಧೃತವಾದ ಅನೇಕ ಶ್ಲೋಕಗಳಲ್ಲದೆ, ಸ್ವತಃ ಕವಿಯಿಂದ ರಚಿತಗೊಂಡ ಅನೇಕ ಶ್ಲೋಕಗಳೂ ಕಂಡುಬರುತ್ತವೆ.[15]

ಪಂಚತಂತ್ರದಲ್ಲಿ ಅಡಕವಾಗಿರುವ ಶೈಕ್ಷಣಿಕ ಮನೋವಿಜ್ಞಾನ ಅಂದರೆ, ಬೆಳೆಯುವ ಎಳಸಾದ ಬುದ್ಧಿ ಕೇಂದ್ರಕ್ಕೆ ಧರ್ಮ, ನೀತಿ–ವ್ಯವಹಾರಗಳನ್ನು ಪರಸ್ಪರ ಬಾಧಕವಿಲ್ಲದಂತೆ ಕಥಾರೂಪವಾಗಿ ಬೋಧಿಸುವ ಪ್ರಪ್ರಥಮ ಗ್ರಂಥವಾಗಿದೆ. ಇಲ್ಲಿನ ಪ್ರತಿಯೊಂದು ಕಥೆಯಲ್ಲೂ ಧರ್ಮವು ಆತ್ಮಸ್ಥಾನದಲ್ಲೂ, ನೀತಿಯು ಇಂದ್ರಿಯ ಸ್ಥಾನಗಳಲ್ಲೂ, ವ್ಯವಹಾರವು ಒಡಲಿನ ಸ್ಥಾನದಲ್ಲಿಯೂ ಇರುತ್ತದೆ. ನೀತಿಕಥೆಗಳಲ್ಲಿ ಮೃಗಪಕ್ಷಿಗಳು, ಕೆಲವೆಡೆ ಗಿಡಮರಗಳನ್ನು ನೀತಿವಿಜ್ಞಾನ ಬೋಧಿಸಲು ಆಯ್ಕೆ ಮಾಡಿಕೊಂಡಿರುವುದರ ವಿಶೇಷತೆ ಏನೆಂದರೆ ಇದು ಮಕ್ಕಳ ಬುದ್ಧಿ ಕೇಂದ್ರಕ್ಕೂ, ಹೃದಯಕ್ಕೂ, ಕೆಲವೆಡೆ ವಯಸ್ಕರ ಮನಸ್ಸಿಗೂ

14. **ವಾಮದೇವಪ್ಪ ಎಚ್.ವಿ.** ಶೈಕ್ಷಣಿಕ ಮನೋವಿಜ್ಞಾನ, ಅ–1, ಪು.–3, ಶ್ರೇಯಸ್ ಪಬ್ಲಿಕೇಶನ್ಸ್, ತರಳಬಾಳು ಬಡಾವಣೆ, ದಾವಣಗೆರೆ, 577 005 (2018)

15. **ಕೃಷ್ಣಮೂರ್ತಿ ಕೆ. ರಂಗನಾಥ ಶರ್ಮ ಸಿದ್ಧಗಂಗಯ್ಯ ಎಚ್. ಕೆ.** ಸಂಸ್ಕೃತ ಭಾಷಾ ಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ, ನೀ.ಕಾ. ಪು.–548, (1976)ಕರ್ನಾಟಕ ಸರ್ಕಾರ, ಪಠ್ಯಪುಸ್ತಕಗಳ ಇಲಾಖೆ ಬೆಂಗಳೂರು.

ಅತ್ಯಂತ ಆಪ್ಯಾಯಮಾನವಾಗಿದೆ ಎಂದು ಹೇಳಬಹುದು. ಕಥಾ ಮಾಧ್ಯಮವು ನೀತಿ ಬೋಧೆಗೆ ಉತ್ತಮ ಸಾಧನ ಎಂಬುದನ್ನು ಪಂಚತಂತ್ರವು ಸ್ಪಷ್ಟಪಡಿಸಿದೆ. ಪಂಚತಂತ್ರದ ಬಗ್ಗೆ ಮಕ್ಕಳ ಮನೋರಂಜನೆಯ ಪುಸ್ತಕ, ಚಂದಮಾಮದಂತೆ ಪ್ರವಾಸ ಸಮಯದಲ್ಲಿ ಬೇಸರವಾಗದಂತೆ ಓದುವ ಪುಸ್ತಕ ಎಂಬ ಒಂದು ಸಾಮಾನ್ಯ ಅಭಿಪ್ರಾಯವಿರುತ್ತದೆ. ಆದರೆ ಇದು ಇಷ್ಟೊಂದು ವಿಶ್ವವ್ಯಾಪಿಯೂ, ಜನಪ್ರಿಯವೂ ಆಗಿರುವುದೆಂದರೆ ಅಂಥಹ ಮಹತ್ವಪೂರ್ಣ ವಿಚಾರವಸ್ತು ಏನಿರಬಹುದೆಂಬ ಕುತೂಹಲದಿಂದ ರೇಖೆಗಳ ನಡುವೆ ಓದುವುದು ಎಂಬಂತೆ ಸೂಕ್ಷ್ಮವಾಗಿ ಅಧ್ಯಯನ ನಡೆಸಲು ಪ್ರಯತ್ನಿಸಿದಾಗ ನನ್ನನ್ನು ಆಕರ್ಷಿಸಿದ ವಿಚಾರವಸ್ತು ಎಂದರೆ ಈ ಅಪೂರ್ವ ಕೃತಿಯಲ್ಲಿ ಕಂಡುಬಂದ ಶೈಕ್ಷಣಿಕ ಮನೋವಿಜ್ಞಾನದ ಪರಿಕಲ್ಪನೆಗಳು ಹಾಗೂ ವ್ಯಕ್ತಿ ನಿರ್ಮಾಣ ಕಲೆ. ಇಂದು ಎಲ್ಲವುದಕ್ಕೂ ತರಬೇತಿ ನೀಡುವ ಮತ್ತು ಪಡೆಯುವ ಯುಗವಾಗಿದೆ.ಸಮಯಪಾಲನೆ, ಕಾರ್ಯಕ್ಷಮತೆ, ವ್ಯಕ್ತಿ-ನಿರ್ಮಾಣ, ಹೀಗೆ ಹಲವು ಹತ್ತು ವಿಚಾರಗಳಿಗೆ ಮಾಹಿತಿ ನೀಡುವ ಪರಿಪಾಠ ಬೆಳೆದುಬಿಟ್ಟಿದೆ. ಪಂಚತಂತ್ರದ ಕಥೆಗಳು ಆ ಕಾಲದಿಂದಲೇ ನಿರಂತರವಾಗಿ ತರಬೇತಿ ಕಾರ್ಯಾಗಾರವನ್ನು ನಡೆಸಿಕೊಂಡು ಬರುತ್ತಿರುವಂತಿದೆ. ವ್ಯಕ್ತಿ ನಿರ್ಮಾಣಕ್ಕೆ ಬೇಕಾದ ಶೈಕ್ಷಣಿಕ ಮನೋವಿಜ್ಞಾನ ಪಂಚತಂತ್ರದಲ್ಲಿ ಅಚ್ಚುಕಟ್ಟಾಗಿ ಹೆಣೆದುಕೊಂಡಿದೆ.

शीलं शौर्यम् अनालस्यम् पाण्डित्यम् मित्रसन्ग्रहः ।
अचोरहरणीयानि पञ्जैतानि अक्षयोनिधिः ।।[16]

ಇಲ್ಲಿ ಇಡೀ ಪಂಚತಂತ್ರಕ್ಕೇ ಹೋಲುವ ಸೊಗಸಾದ ತಿಳುವಳಿಕೆ ಸೂಚಿಸಲಾಗಿದೆ. **ಶುದ್ಧ ಚಾರಿತ್ರ್ಯ, ಪರಾಕ್ರಮ, ಚುರುಕುತನ, ವಿದ್ವತ್ತು, ಗೆಳೆಯರ ಸಂಗ್ರಹ** ಈ ಐದೂ ಕಳ್ಳರು ಕದಿಯದ ಅಕ್ಷಯನಿಧಿ. ಪಂಚತಂತ್ರದ ನೀತಿಕಥೆಗಳು ಮನೋವೈಜ್ಞಾನಿಕವಾಗಿ, ಮನೋಜ್ಞವಾಗಿ ಹಾಗೂ ಮನೋರಂಜಕವಾಗಿ ಇಂಥಹ ಗುಣಗಳನ್ನುಳ್ಳ ವ್ಯಕ್ತಿ ನಿರ್ಮಾಣಕ್ಕೆ ಶಿಕ್ಷಣವನ್ನು ಬೋಧಿಸುತ್ತವೆ.

ಈ ಮಹಾಪ್ರಬಂಧ ರಚನೆಗೆ ಜ್ಞಾನದ ಕಿರಣಗಳನ್ನೊದಗಿಸಿ ವಿವಿಧ ವಿಚಾರಗಳ ಅರಿವು ಮೂಡಿಸಿ ಸಹಾಯ ಮಾಡಿದ ಗ್ರಂಥಗಳನ್ನು ಅನುಬಂಧದಲ್ಲಿ ಹೆಸರಿಸಿ ಸೂಚಿಸಲಾಗಿದೆ.

## ಪರಾಮರ್ಶನ ಗ್ರಂಥಗಳು


1. **ಭರತ ಬಿ. ರಾವ್,** 'ಪಂಚತಂತ್ರ' (ವಿಷ್ಣುಶರ್ಮವಿರಚಿತ ಮೂಲ ಪಂಚತಂತ್ರದ ಸಂಪೂರ್ಣ ಕನ್ನಡಾನುವಾದ), ಜ್ವಾಲಾಮುಖಿ ಮುದ್ರಣಾಲಯ(ಪ್ರೈ.ಲಿ.), 44/1 ಕೆ. ಆರ್. ರಸ್ತೆ, ಬಸವನಗುಡಿ, ಬೆಂಗಳೂರು - 560 004, (2018).
2. **ಭಾರದ್ವಾಜ್ ವಿನಯ್ ಕುಮಾರ್,** ಲೌಕಿಕ ಸಂಸ್ಕೃತ ಸಾಹಿತ್ಯ ಕಾ ಇತಿಹಾಸ್ (classicalSanskritLiterature),
3. **ಚಕ್ರವರ್ತಿ ಜಿ.ಎನ್,** 'ಸಂಸ್ಕೃತ-ಕನ್ನಡ ನಿಘಂಟು', ಗೀತಾಬುಕ್ ಹೌಸ್,ಮೈಸೂರು-570001(2013)
4. **DASH KESHAB CHANDRA**,"Elements of Research Methodology of Sanskrit", Chaukhambha Sanskrit Sansthan, P.B. No 1139, K.37/116 Goal Mandir Lane, VARANASI- 221001 (INDIA) 1992)


---

16. **ಭಟ್ ವಿ.ಎನ್.** ಜ್ಞಾನದೀಪ, ಅಧ್ಯಾಯ- 92, ಪು-191, ಸುಭಾಷಿತರತ್ನ ಭಾಂಡಾಗಾರ, ವಿಶ್ವನಾಥ ಪ್ರಕಾಶನ, ಜ್ಞಾನದೀಪ, ಸಹ್ಯಾದ್ರಿ ನಗರ, ವಿನೋಬ ನಗರ ಬಡಾವಣೆ ಶಿವಮೊಗ್ಗ - 577 201

5. **DWIVEDI PRABHUNATH,** SURESHCHANDRA CHOWBE,"Sanskrit Research Methodology, Sharada Samskruta Samsthan,(2017)C.27/59, Jagatganj, Varanasi-221002.

6. **GUIDELINES,** E 2, Psychology of Education (M.Ed), ICC&CE, University of Mysore, Manasagangotri, Mysore-570006,(1995).

7. **ಮರ್ಫಿ ಜೋಸೆಫ್,** 'ನಿಮ್ಮ ಸುಪ್ತ ಪ್ರಜ್ಞಾ ಮನಸ್ಸಿನ ಶಕ್ತಿ', ಅನುವಾದಕರು – ಶಿವಾನಂದ ಬೇಕಲ್, ಮಂಜುಳ್ ಪಬ್ಲಿಷಿಂಗ್ ಹೌಸ್, (2016)2nd Floor, Usually Prefer Complex, 42, Malviya Nagar, Bhopal-462003, India.(2018)

8. **ಮಾಲವೀಯ ಸುಧಾಕರ,** 'ಶ್ರೀ ವಿಷ್ಣುಶರ್ಮ ವಿರಚಿತಮ್ ಪಂಚತಂತ್ರಮ್', ಚೌಕಾಂಬ ಕೃಷ್ಣದಾಸ್ ಅಕಾಡೆಮಿ, (1993) Oriental Publishers & Distributors, K.37/118 Gopal Mandir Lane,P.B.No-1118, ವಾರಣಾಸಿ - 221001.

9. **MISHRA VINAY,** "everyday psychology", Manjul Publishing House, 7/32, Ground floor, Ansari Road, Daryaganj, New Delhi - 110002,(2016).

10. **MLA Hand Book for Writers of Research Papers,** 7th edition, EWP,, Affiliated East-West Press Pvt Ltd, New Delhi, 110001, (2009.)

11. **PANDEY GYANENDRA,** Panchatantram (Apareekshitakarakam), Chowkamba Krishna's Academy, PB No1118, K.37/118 GopalMandir Lane Near Golghar, Varanasi - 221001 (2007)

12. **Panel of Experts GPH,** "General Psychology", GullyBaba Publishing House(P) Ltd, Tri Nagar, Delhi - 110035, (2017).

13. **RAJAN CHANDRA,** Translated from the Sanskrit with an Introduction, "VISNU SARMA" The Pancatantra, PENGUIN CLASSICS, (1993). Penguin Random House India Pvt. Ltd. 7th Floor, Infinity Tower C, DLF Cyber City, Gurgaon-12202, Haryana, India.

14. **RAM SADHU,** Essays on Sanskrit Literature (Bearing on Ancient Sanskrit Literature and Indian Culture), (1965), Munshi Ram Manhattan All, Oriental Book Sellers and Publishers, P.B.No - 1165, Nai Sarah, Delhi - 6.

15. **ಸೋಮಯಾಜಿ ಚಿತ್ರಪಾಡಿ ಉಪೇಂದ್ರ,** "ಬದುಕಿನಮಂತ್ರ ಪಂಚತಂತ್ರ", ಎಂಭತ್ತಾರು ಕಥೆಗಳು ಮತ್ತು ನೀತಿಶತಕ ಅರ್ಥ ಸಹಿತ, ಪ್ರಕಾಶಕರು ವರ್ನಿಲ, 39/2– 2 ಕಲ್ಯಾಣ್ ಗಾರ್ಡನ್, ಬಿಎಸ್ ಕೆ 2 ಸ್ಟೇಜ್, ಬೆಂಗಳೂರು, ಪ್ರಥಮ ಪ್ರಕಾಶನ, (2015)

16. **SHARMA PANDITHA VISHNU** ,"PANCHATANTRA", Translated by G.L.Chandiramani, RUPA. publicationsIndia Pvt.Ltd.(1991), 7/16,Ansari Road, Daryaganj, New Delhi-110002.

17. **SHASTRI GURUPRASAD** सं. टी., Sitaram Shastri हिं. टी., Bala Shastri संपा, श्री विष्णुशर्म विरचितम् पञ्चतन्तम्, Chowkamba Surabharathi Prakashan, K.37/117, GopalMandir Lane, P.B. No-1129, Varanasi-221001 (2018)

18. **ಶಾಸ್ತ್ರಿ ಅಗರವಾಲ್ ಜನಾರ್ದನ್ ಸ್ವರೂಪ್,** "ಸಂಸ್ಕೃತ್ ಸಾಹಿತ್ಯ ಕಾ ಇತಿಹಾಸ್", ಸ್ಟೂಡೆಂಟ್ ಸ್ಟೋರ್, ಬರೇಲಿ, ಚತುರ್ಥಸಂಸ್ಕರಣ್ (2005)

19. **ಸುಭಾಷಿತಮಂಜರೀ,** ಸಂಪಾ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-18 (2001)

20. **ವಾಮದೇವಪ್ಪ ಹೆಚ್. ವಿ.,** 'ಶೈಕ್ಷಣಿಕ ಮನೋವಿಜ್ಞಾನ', ಶ್ರೇಯಸ್ ಪಬ್ಲಿಕೇಷನ್ಸ್-(2018) ದಾವಣಗೆರೆ-577005, 2005.

21. **ವೆಂಕಟನಾಥಾಚಾರ್ಯ ಎನ್. ಎಸ್. ಮತ್ತು ಶಿವಕುಮಾರ ಸ್ವಾಮಿ ಎಂ.,** 'ಪಂಚತಂತ್ರ' (Mitrabedha:1chapter) of Vishnusharma with Kannada translation with original Sanskrit prose and verse, Director, prasaranga, University of Mysore. Mysore-6,(2000).

22. **ವೆಂಕಣ್ಣಯ್ಯ ತ.ಶಾ.,** 'ಗುಮಾನಿ ಕವಿಯ ಉಪದೇಶಶತಕಂ', ಶ್ರೀ ಶಾರದಾ ಟ್ರಸ್ಟ್. 4581, 'ಗೋಮತಿ' ನರಸಿಂಹರಾಜ ಮೊಹಲ್ಲಾ, ಮೈಸೂರು-570007, (1989).

23. **ವೀರಪ್ಪ N.S.** ಶಿಕ್ಷಣದಲ್ಲಿ ಮನೋವಿಜ್ಞಾನ - ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು-4, (1962).



Dr. NAGARAJA B.
Prof.& Guide in Sanskrit.
S.D.C.P.G.S & R.S.
Mangalore University
KATEEL-574148.D.K.Dist.

CHAIRMAN,
B.O.S in Sanskrit

Mr.NAGARAJA N. D.
Research Scholar in Sanskrit
S.D.C.P.G.S & R.S.
Mangalore University,
KATEEL-574148.D.K.Dist.